ಆರ್.ಬಿ.ಐ / 2008-2009 / 225 ಅಕ್ಟೋಬರ್ 15, 2008
ಯುಬಿಡಿ.ಪಿಸಿಬಿ.ಸಿಐಆರ್.ನಂ. 6 / 13.05.000 / 2008-09

ಎಲ್ಲ ಪ್ರಾಥಮಿಕ ಅನುಸೂಚಿತ(ಪೌರ) ಸಹಕಾರಿ ಬ್ಯಾಂಕುಗಳ
ಮುಖ್ಯ ಕಾರ್ಯಕಾರಿ ನಿರ್ದೇಶಕರುಗಳಿಗೆ

ಮನ್ಯರೆ

**7% ಉಳಿತಾಯ ಬಾಂಡುಗಳು 2002, 6.5% ಉಳಿತಾಯ ಬಾಂಡುಗಳು 2003 (ತೆರಿಗೆಗೊಳಪಡದ) ಮತ್ತು 8% ಉಳಿತಾಯ (ತೆರಿಗೆಗೊಳಪಡುವ) ಬಾಂಡುಗಳು 2003 – ಸಹಭದ್ರತಾ ಸೌಲಭ್ಯ – ಪೌರ ಸಹಕಾರಿ ಬ್ಯಾಂಕುಗಳು**

ನಿಮಗೆ ತಿಳಿದಿರುವಂತೆ, ಭಾರತ ಸರಕಾರದ ಸಂಬಂಧಿತ ಅಧಿಸೂಚನೆಗಳ ಅನುಸಾರವಾಗಿ, ಮೇಲೆ ಹೇಳಿರುವ ಯೋಜನೆಯ ಅನ್ವಯ, ನೀಡಿದ ಉಳಿತಾಯ ಬಾಂಡುಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಮುಂತಾದವುಗಳಿಂದ ಪಡೆಯುವ ಸಾಲಕ್ಕೆ ಸಹಭದ್ರತೆಯಾಗಲು ಅರ್ಹವಾಗಿರುವುದಿಲ್ಲ.

2. ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು, ಮೇಲೆ ಹೇಳಿರುವ ಯೋಜನೆಯ ಅನುಸಾರ ನೀಡಿದ ಬಾಂಡುಗಳನ್ನು ಸಹಭದ್ರತೆಯಾಗಿ ಒತ್ತೆ ಅಥವಾ ಅಡಮಾನ ಅಥವಾ ಆಧಾರವಾಗಿ ಅನುಮತಿಸಲು ಭಾರತ ಸರಕಾರ ಈಗ ನಿರ್ಧರಿಸಿದೆ.

ಅದರಂತೆ, ಸರಕಾರಿ ಭದ್ರತಾ ಪತ್ರಗಳ ಕಾಯಿದೆ 2006(ಜಿ.ಎಸ್. ಕಾಯಿದೆ)ರ ಪ್ರಕರಣ 28 ಮತ್ತು ಸರಕಾರಿ ಭದ್ರತಾ ಪತ್ರಗಳ ನಿಯಂತ್ರಣಗಳು 2007(ಜಿ.ಎಸ್. ನಿಯಂತ್ರಣಗಳು)ರ ನಿಯಂತ್ರಣ 21 ಮತ್ತು 22ರ ಅನ್ವಯ, ಮೇಲೆ ಉಲ್ಲೇಖಿಸಿದ ಬಾಂಡ್‌ಗಳ ಧಾರಕರು, ಅನುಸೂಚಿತ ಬ್ಯಾಂಕುಗಳ ಪರವಾಗಿ ಒತ್ತೆ ಅಥವಾ ಅಡಮಾನ ಅಥವಾ ಆಧಾರ ರೂಪಿಸಲು ಅರ್ಹರಾಗಿರುತ್ತಾರೆ. ಭಾರತ ಸರಕಾರದಿಂದ ನೀಡಲ್ಪಟ್ಟ ತಿದ್ದುಪಡಿಯಾದ ಈ ಕೆಳಗಿನ ಅಧಿಸೂಚನೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ:

ಎ) 7% ಉಳಿತಾಯ ಬಾಂಡುಗಳು 2002 ಗಳಿಗಾಗಿ – ಸಂ. ಎಫ್.4 (13)–ಡಬ್ಲ್ಯು ಮತ್ತು ಎಮ್ / 2002 ದಿನಾಂಕ ಆಗಸ್ಟ್ 19, 2008
ಬಿ) 6.5% ಉಳಿತಾಯ ಬಾಂಡುಗಳು (ತೆರಿಗೆಗೊಳಪಡದ) 2003 ಗಳಿಗೆ – ಸಂ. ಎಫ್.4 (9)–ಡಬ್ಲ್ಯು ಮತ್ತು ಎಮ್ / 2003 ದಿನಾಂಕ ಆಗಸ್ಟ್ 19, 2008 ಮತ್ತು
ಸಿ) 8% ಉಳಿತಾಯ (ತೆರಿಗೆ ಸಹಿತ) ಬಾಂಡುಗಳು 2003ಗಳಿಗಾಗಿ – ಸಂ. ಎಫ್.4 (10)–ಡಬ್ಲ್ಯು ಮತ್ತು ಎಮ್ / 2003 ದಿನಾಂಕ ಆಗಸ್ಟ್ 19, 2008

3. ಮೇಲಿನ ತಿದ್ದುಪಡಿಗಳನ್ನು ಗಮನದಲ್ಲಿರಿಸಿಕೊಂಡು, ಸರಕಾರಿ ಭದ್ರತಾ ಪತ್ರಗಳ ಜಿ.ಎಸ್. ಕಾಯಿದೆಯ ಪ್ರಕರಣ 28 ಮತ್ತು ಸರಕಾರಿ ಭದ್ರತಾ ಪತ್ರಗಳ ನಿಯಂತ್ರಣ 21 ಮತ್ತು 22ರಲ್ಲಿ

ತಿಳಿಸಿರುವ ಪ್ರಕ್ರಿಯೆಗಳ ಅನುಸಾರ, ಒತ್ತೆ ಅಥವಾ ಅಡಮಾನ ಅಥವಾ ಆಧಾರದ ಮೂಲಕ ಸಹಭದ್ರತೆ ಸೌಲಭ್ಯವನ್ನು ವಿಸ್ತರಿಸಲು ನಿಗದಿತ ಶಾಖೆಗಳಿಗೆ ದಯವಿಟ್ಟು ಸೂಕ್ತ ರೀತಿಯಲ್ಲಿ ಸೂಚನೆಗಳನ್ನು ನೀಡಿ. ಒತ್ತೆ, ಅಥವಾ ಅಡಮಾನ ಅಥವಾ ಆಧಾರಗಳ ದಾಖಲಾತಿ ಹಾಗೂ ಅವುಗಳ ನಗದೀಕರಣಗಳಿಗಾಗಿ, ನಿಯಂತ್ರಣಗಳು ಹಾಗೂ ವಿಧಾನಗಳನ್ನು ಕಾರ್ಯರೂಪಕ್ಕೆ ತರುವ ಅಗತ್ಯಗಳನ್ನು, ನೀಡುವ ಕಚೇರಿಗಳಲ್ಲಿ ವ್ಯವಸ್ಥೆಗೊಳಿಸಿಕೊಳ್ಳಬೇಕು. ಕಾಯಿದೆ / ನಿಯಂತ್ರಣಗಳ ಪ್ರಸ್ತುತ ಉದ್ಧೃತ ಭಾಗಗಳನ್ನು ಭಾರತ ಸರಕಾರ ನೀಡಿದ ನಮೂನೆಗಳು ಮತ್ತು ಸಂಬಂಧಪಟ್ಟ ಪತ್ರಿಕಾ ಪ್ರಕಟಣೆಯೊಂದಿಗೆ ಸಿದ್ಧ ಪರಿಶೀಲನೆಗಾಗಿ ಲಗತ್ತಿಸಲಾಗಿದೆ.

4. ಸಹಭದ್ರತೆ ಸೌಲಭ್ಯವು, ಬಾಂಡು ಧಾರಕರಿಗೆ ನೀಡಿದ ಸಾಲಕ್ಕೆ ಮಾತ್ರ ಲಭ್ಯವಿರುತ್ತದೆಯಲ್ಲದೆ, ಈ ಸೌಲಭ್ಯವು ಮೂರನೆ ಪಕ್ಷಗಾರರಿಗೆ ನೀಡಿದ ಸಾಲಕ್ಕೆ ಲಭ್ಯವಿರುವುದಿಲ್ಲವೆಂಬುದನ್ನು ಗಮನಿಸಬೇಕಾಗಿದೆ. ಈ ಸಂಬಂಧದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಗಳಿಗೆ ಸಂಬಂಧಿಸಿದ ಇಲಾಖೆಗಳು ಎಲ್ಲ ಅನುಸೂಚಿತ ಬ್ಯಾಂಕುಗಳಿಗೆ ಪ್ರತ್ಯೇಕ ಸೂಚನೆಯನ್ನು ನೀಡುತ್ತಿವೆ.

5. ಸಂಬಂಧಿತ ಪ್ರಾದೇಶಿಕ ಕಚೇರಿಗೆ ದಯವಿಟ್ಟು ಸ್ವೀಕೃತಿಯನ್ನು ನೀಡುವುದು.

ತಮ್ಮ ವಿಶ್ವಾಸಿ

(ಎ.ಕೆ. ಖೌಂದ್)
ಮುಖ್ಯ ಮಹಾ ವ್ಯವಸ್ಥಾಪಕರು – ಪ್ರಭಾರಿ

**ಸರಕಾರಿ ಭದ್ರತಾ ಕಾಯಿದೆ 2006ರ ಉದ್ಧೃತ ಭಾಗ**
**ಪ್ರಕರಣ 28**

**28. ಒತ್ತೆ, ಅಡಮಾನ ಅಥವಾ ಆಧಾರ** (1) ನಿಗದಿ ಪಡಿಸುವ ನಿಬಂಧನೆಗಳು ಮತ್ತು ಶರತ್ತುಗಳಿಗೆ ಅನುಗುಣವಾಗಿ, ಸರಕಾರಿ ಭದ್ರತಾ ಪತದ ಧಾರಕರು, ಅ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ, ಒತ್ತೆ ಅಥವಾ ಅಡಮಾನ ಅಥವಾ ಆಧಾರವನ್ನು ರೂಪಿಸಬಹುದು. (2) ಸರಕಾರಿ ಭದ್ರತಾ ಪತ್ರದ ಧಾರಕನಿಂದ ಒತ್ತೆ ಅಥವಾ ಅಡಮಾನ ಅಥವಾ ಅಧಾರದ ಬಗ್ಗೆ ಸೂಚನೆ ಪಡೆದಾಗ, ಭದ್ರತಾ ಪತ್ರಕ್ಕೆ ಸಂಬಂಧಿಸಿದ ಖಾತೆಯನ್ನು ನಿರ್ವಹಿಸುತ್ತಿರುವ ಬ್ಯಾಂಕು ಅಥವಾ ಯಾವುದೇ ಏಜೆಂಟರು ತಮ್ಮ ದಾಖಲೆಗಳಲ್ಲಿ ಅಗತ್ಯವಿರುವ ದಾಖಲಾತಿಯನ್ನು ಮಾಡಿಕೊಳ್ಳಬೇಕು ಮತ್ತು ಈ ದಾಖಲಾತಿಯ ಸಂಬಂಧಿಸಿದ ಒತ್ತೆ, ಅಡಮಾನ ಅಥವಾ ಆಧಾರ ನೀಡಿರುವುದಕ್ಕೆ ಸಾಕ್ಷ್ಯವಾಗಿರುತ್ತದೆ.

**ಸರಕಾರಿ ಭದ್ರತಾ ನಿಯಂತ್ರಣಗಳು 2007ರ ಉದ್ಧೃತ ಭಾಗ**

**ಅಧ್ಯಾಯ – VII**

**ಸರಕಾರಿ ಭದ್ರತಾ ಪತ್ರದಮೇಲೆ ಒತ್ತೆ, ಅಡಮಾನ ಅಥವಾ ಆಧಾರ**

**21. ಸರಕಾರಿ ಭದ್ರತಾ ಪತ್ರದಮೇಲೆ ಒತ್ತೆ, ಅಡಮಾನ ಅಥವಾ ಆಧಾರ**

(1) ಸರಕಾರಿ ಭದ್ರತಾ ಪತ್ರದ ಧಾರಕನು ಈ ಕೆಳಗೆ ಸೂಚಿಸಿದಂತೆ ಸರಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿ ಒತ್ತೆ ಅಥವಾ ಅಡಮಾನ ಅಥವಾ ಆಧಾರವನ್ನು ರೂಪಿಸಬಹುದು:

(ಎ) ನಮೂನೆ XIV ರಲ್ಲಿ, ತ್ರಿಪ್ರತಿಗಳಲ್ಲಿ ಒತ್ತೆ ಅಥವಾ ಅಡಮಾನ ಅಥವಾ ಆಧಾರದ ಬಗ್ಗೆ ಬ್ಯಾಂಕಿಗೆ ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟ್‌ಗೆ, ಸೂಚನೆಯನ್ನು ನೀಡುವುದು; ಮತ್ತು

(ಬಿ) ನಿಧಿ ಪತ್ರ ಮತ್ತು ಸಂಬಂಧಿತ ಕ್ರಮಬದ್ಧವಾಗಿ ನಿರ್ವಹಿಸಿದ ನಮೂನೆ IIIನ್ನು ಸಲ್ಲಿಸುವುದು; ಅಥವಾ ಪ್ರಕರಣಕ್ಕೆ ತಕ್ಕಂತೆ, ಸಹಾಯಕ ಸಾಮಾನ್ಯ ಲೆಡ್ಜರ್ ಖಾತೆ (ಎಸ್.ಜಿ.ಎಲ್) ಅಥವಾ ಘಟಕಗಳ ಸಹಾಯಕ ಸಾಮಾನ್ಯ ಲೆಡ್ಜರ್ ಖಾತೆ ಅಥವಾ ಬಾಂಡ್ ಲೆಡ್ಜರ್ ಖಾತೆಯಲ್ಲಿ ಹೊಂದಿರುವ ಸರಕಾರಿ ಭದ್ರತಾ ಪತ್ರಗಳಮೇಲೆ ಒತ್ತೆ, ಅಡಮಾನ ಅಥವಾ ಆಧಾರ ರೂಪಿಸಬೇಕಾದಲ್ಲಿ ಸರಕಾರಿ ಭದ್ರತಾ ಪತ್ರಗಳ ಮೇಲೆ ಕ್ರಮಬದ್ಧವಾಗಿ ನಿರ್ವಹಿಸಿದ ನಮೂನೆ III, IV ಅಥವಾ V ಸಲ್ಲಿಸುವುದು.

(2) ಪ್ರಕರಣಕ್ಕೆ ತಕ್ಕಂತೆ, ಬ್ಯಾಂಕು ಅಥವಾ ಅದರ ಏಜೆಂಟ್, ಉಪನಿಯಂತ್ರಣ (1)ರ ಖಂಡ (ಎ)ನಲ್ಲಿ ಉಲ್ಲೇಖಿಸಿದ ಸೂಚನೆಯನ್ನು ಪಡೆದಾಗ :

(ಎ) ಒತ್ತೆ, ಅಡಮಾನ ಅಥವಾ ಆಧಾರವನ್ನು ತನ್ನ ದಾಖಲೆಗಳಲ್ಲಿ ನಮೂದಿಸುವುದು ಮತ್ತು ನಮೂನೆ XIV ರ ಎರಡನೆ ಮತ್ತು ಮೂರನೆ ಪ್ರತಿಯಲ್ಲಿ ಅದನ್ನು ದೃಢೀಕರಿಸುವುದು ಮತ್ತು ಈ ದೃಢೀಕರಣವು ರೂಪಿಸಿದ ಒತ್ತೆ, ಅಡಮಾನ ಅಥವಾ ಆಧಾರದ ನಿರ್ಣಾಯಕ ರುಜುವಾತು ಆಗಿರುತ್ತದೆ, ಮತ್ತು

(ಬಿ) ನಮೂನೆ XIV ರಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ, ಒತ್ತೆ, ಅಡಮಾನ ಅಥವಾ ಆಧಾರವನ್ನು ನಮೂದಿಸದೆ ಇರುವುದಕ್ಕೆ, ಕಾರಣಗಳೊಂದಿಗೆ ನಮೂನೆ XIV ರ ಸೂಚನೆಯ ಎರಡನೆ ಮತ್ತು ಮೂರನೆ ಪ್ರತಿಗಳಲ್ಲಿ ರಿಟರ್ನ್ ಮೆಮೋವನ್ನು ನೀಡುವುದು.

3. ಒತ್ತೆ ಇಡಿಸಿಕೊಂಡವನು ಅಥವಾ ಸಾಲ ಕೊಡುವವನು, ಯಾವುದೇ ಸಂದರ್ಭದಲ್ಲಿ, ಒತ್ತೆ, ಅಡಮಾನ ಅಥವಾ ಆಧಾರವನ್ನು ನಗದೀಕರಿಸಲು ಇಚ್ಛಿಸಿದಾಗ, ನಮೂನೆ XV ರಲ್ಲಿ ದ್ವಿಪ್ರತಿಗಳಲ್ಲಿ, ಸರಕಾರಿ ಭದ್ರತಾ ಪತ್ರವನ್ನು ತನ್ನ ಪರವಾಗಿ ವರ್ಗಾಯಿಸಲು ಈ ಕೆಳಗಿನ ದಾಖಲೆಗಳೊಂದಿಗೆ ಬ್ಯಾಂಕಿಗೆ ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟಿಗೆ ಅರ್ಜಿಯನ್ನು ಸಲ್ಲಿಸಬಹುದು:

(ಎ) ನಿಧಿ ಪತ್ರ ಯಾವುದಾದರು ಇದ್ದಲ್ಲಿ;

(ಬಿ) ಬ್ಯಾಂಕು ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟು, ಒತ್ತೆಯ ದಾಖಲೆಯನ್ನು ದೃಢೀಕರಿಸಿದ ನಮೂನೆ XIV ಮತ್ತು

(ಸಿ) ಒತ್ತೆ, ಅಡಮಾನ ಅಥವಾ ಆಧಾರದ ಸಮಯದಲ್ಲಿ ಧಾರಕನು ಬರೆದು ಕೊಟ್ಟಂತಹ ಹಾಗೂ ಸರಕಾರಿ ಭದ್ರತಾ ಪತ್ರಗಳಿಗೆ ಅನ್ವಯವಾಗುವಂತಹ ನಮೂನೆ III, IV ಅಥವಾ V

4. ಉಪನಿಯಂತ್ರಣ (3)ರ ಅಡಿಯಲ್ಲಿ, ಬ್ಯಾಂಕು ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟು, ಅರ್ಜಿಯನ್ನು ಸ್ವೀಕರಿಸಿದಾಗ –

(ಎ) ಒತ್ತೆ, ಅಡಮಾನ ಅಥವಾ ಆಧಾರದ ನಗದೀಕರಣವನ್ನು ಹಾಗೂ ಒತ್ತೆ ಇಡಿಸಿಕೊಂಡವನ ಅಥವಾ ಸಾಲ ಕೊಡುವವನ ಪರವಾಗಿ ಭದ್ರತಾ ಪತ್ರಗಳ ವರ್ಗಾವಣೆಯನ್ನು ತನ್ನ ಪುಸ್ತಕಗಳಲ್ಲಿ ದಾಖಲಿಸುವುದು ಮತ್ತು ಅರ್ಜಿ ನಮೂನೆ XV ರ ಎರಡನೆ ಪ್ರತಿಯಲ್ಲಿ ಇದನ್ನು ದೃಢೀಕರಿಸುವುದು; ಅಥವಾ

(ಬಿ) ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ, ಒತ್ತೆ ಇಡಿಸಿಕೊಂಡವನ ಅಥವಾ ಸಾಲ ಕೊಡುವವನ ಹೆಸರಲ್ಲಿ ವರ್ಗಾವಣೆ ಮಾಡದಿರುವುದಕ್ಕೆ, ಕಾರಣಗಳೊಂದಿಗೆ ನಮೂನೆ XV ರ ಎರಡನೆ ಪ್ರತಿಯಲ್ಲಿ ಒತ್ತೆ ಇಡಿಸಿಕೊಂಡವನಿಗೆ ಅಥವಾ ಸಾಲ ಕೊಡುವವನಿಗೆ ರಿಟರ್ನ್ ಮೆಮೋವನ್ನು ನೀಡುವುದು.

5. ಒತ್ತೆ ಇಡಿಸಿಕೊಂಡವನು ಅಥವಾ ಸಾಲ ಕೊಡುವವನು, ಬ್ಯಾಂಕು ಅಥವಾ ಅದರ ಏಜೆಂಟ್‌ನ ಪುಸ್ತಕಗಳಲ್ಲಿ ಸರಕಾರಿ ಭದ್ರತಾ ಪತ್ರಗಳ ವರ್ಗಾವಣೆ ದಾಖಲಾಗುವ ಮೊದಲು, ಯಾವುದೇ ಸಮಯದಲ್ಲಿ, ಬ್ಯಾಂಕಿಗೆ ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟ್‌ಗೆ ನಮೂನೆ XVI ರ ತ್ರಿಪ್ರತಿಗಳಲ್ಲಿ ಇಂತಹ ಒತ್ತೆ, ಅಡಮಾನ ಅಥವಾ ಆಧಾರದ ಅರ್ಜಿ ನೋಂದಣಿಯ ರದ್ದತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

6. ಉಪನಿಯಂತ್ರಣ (5)ರ ಅಡಿಯಲ್ಲಿ ಅರ್ಜಿಯನ್ನು ಪಡೆದಾಗ, ಬ್ಯಾಂಕು ಅಥವಾ ಪ್ರಕರಣಕ್ಕೆ ತಕ್ಕಂತೆ ಅದರ ಏಜೆಂಟು –

(ಎ) ತನ್ನ ಪುಸ್ತಕದಲ್ಲಿ ದಾಖಲಾದ ಒತ್ತೆ, ಅಡಮಾನ ಅಥವಾ ಆಧಾರದ ರದ್ದತಿಯನ್ನು ದಾಖಲಿಸುವುದು ಮತ್ತು ರದ್ದತಿಯನ್ನು ನಮೂನೆ XVI ರ ಎರಡನೆ ಮತ್ತು ಮೂರನೆ ಪ್ರತಿಗಳಲ್ಲಿ ದೃಢೀಕರಿಸುವುದು. ಮತ್ತು

(ಬಿ) ನಮೂನೆ XVI ರ ಎರಡನೆ ಮತ್ತು ಮೂರನೆ ಪ್ರತಿಗಳಲ್ಲಿ ಒತ್ತೆ, ಅಡಮಾನ ಅಥವಾ ಆಧಾರವನ್ನು ರದ್ದತಿ ಮಾಡದಿರುವುದಕ್ಕೆ ಕಾರಣಗಳನ್ನು ತಿಳಿಸುತ್ತಾ ಒತ್ತೆ ಇಡಿಸಿಕೊಂಡವನು ಅಥವಾ ಸಾಲ ಕೊಡುವವನಿಗೆ ರಿಟರ್ನ್ ಮೆಮೊವನ್ನು ನೀಡುವುದು.

(7) ಸರಕಾರಿ ಭದ್ರತಾಪತ್ರಗಳಿಗೆ ಸಂಬಂಧಿಸಿದಂತೆ, ಒತ್ತೆ, ಅಡಮಾನ ಅಥವಾ ಆಧಾರವನ್ನು ರೂಪಿಸುವಾಗ ಬರೆದುಕೊಟ್ಟ ನಮೂನೆ III, IV ಮತ್ತು V, ಒತ್ತೆ, ಅಡಮಾನ ಅಥವಾ ಆಧಾರ ಚಲಾವಣೆಯಲ್ಲಿರುವಾಗ ಊರ್ಜಿತವಾಗಿರುತ್ತದೆ.

(8) ಈ ನಿಯಂತ್ರಣಗಳಲ್ಲಿ ನಿಗದಿಪಡಿಸಿದ ನಮೂನೆಗಳಿಗೆ ಒಳಪಟ್ಟು, ವರ್ಗಾವಣೆ ಅರ್ಜಿ, ಒತ್ತೆ ಅಡಮಾನ ಅಥವಾ ಅಧಾರದ ಅರ್ಜಿ, ಒತ್ತೆ ಅಡಮಾನ ಅಥವಾ ಆಧಾರದ ದೃಢೀಕರಣ, ಒತ್ತೆ ಆಡಮಾನ ಅಥವಾ ಆಧಾರದ ರದ್ದತಿ ಅರ್ಜಿ, ಅಥವಾ ನಗದೀಕರಣದ ರಿಟರ್ನ್ ಮೆಮೊವನ್ನು ಮಾಹಿತಿ ತಂತ್ರಜ್ಞಾನ ಕಾಯಿದೆ 2000(2000 ದ 21)ದ ಕಲಮು 2ರ ಖಂಡ(ಪಿ)ಯಲ್ಲಿ ವ್ಯಾಖ್ಯಾನಿಸಿದಂತೆ ಡಿಜಿಟಲ್ ಸಹಿಯೊಂದಿಗೆ ವಿದ್ಯುನ್ಮಾನ ಪದ್ಧತಿಯಲ್ಲಿ ಕಾರ್ಯಗತಗೊಳಿಸಬಹುದು.

22. **ಒತ್ತೆ, ಅಡಮಾನ ಮತ್ತು ಆಧಾರಕ್ಕೆ ಸಂಬಂಧಿಸಿದಂತೆ ಸಾಮನ್ಯ ಉಪಬಂಧಗಳು**

(1) ಬ್ಯಾಂಕು ಅಥವಾ ಸರಕಾರ, ಸಂದರ್ಭಾನುಸಾರ ಒತ್ತೆ, ಅಡಮಾನ ಅಥವಾ ಆಧಾರವನ್ನು ರೂಪಿಸುವ ಯಾವುದೇ ವ್ಯಕ್ತಿಗೆ ಜವಾಬ್ದಾರನಾಗಿರುವುದಿಲ್ಲ ಅಥವಾ ಒತ್ತೆ ಅಡಮಾನ ಅಥವಾ ಆಧಾರದ ಶರತ್ತುಗಳ ಉಲ್ಲಂಘನೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಅನುಸಾರ ಒತ್ತೆ ಇಡಿಸಿಕೊಂಡವನು ಅಥವಾ ಸಾಲ ನೀಡಿದವನು ಒತ್ತೆ, ಅಡಮಾನ ಅಥವಾ ಆಧಾರವನ್ನು ನಗದೀಕರಿಸಿದಾಗ ಸಂಭವಿಸಬಹುದಾದ ಯಾವುದೇ ನಷ್ಟಕ್ಕೆ ಭಾಗಿಯಾಗುವುದಿಲ್ಲ.

(2) ಬ್ಯಾಂಕು ಅಥವಾ ಸಂದರ್ಭಾನುಸಾರ ಅದರ ಏಜೆಂಟು

(ಎ) ನಮೂನೆ XIV, XV ಅಥವಾ XVI ಸ್ವೀಕರಿಸಿ, ನಿಯಂತ್ರಣ 21ರ ಅಡಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವ ಮೊದಲು, ಯಾವುದೇ ವ್ಯಕ್ತಿಯಿಂದ ಬರಬಹುದಾದ ಯಾವುದೇ ಸೂಚನೆ ಅಥವಾ ಹಕ್ಕು ಸಾಧನೆಯನ್ನು ಗಮನಿಸಬಾರದು.

(ಬಿ) ಈ ತರಹದ ಯಾವುದೇ ಸೂಚನೆ ಅಥವಾ ಹಕ್ಕು ಸಾಧನೆ ಬಂದಿಲ್ಲವೆಂದು ಭಾವಿಸಿ ನಿಯಂತ್ರಣ 21ರ ಅಡಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು.

(3) ಒತ್ತೆ ಇಟ್ಟುಕೊಂಡವನ ಅಥವಾ ಸಂದರ್ಭಾನುಸಾರ ಸಾಲ ನೀಡಿದವನ ಪೂರ್ವಾನುಮತಿಯಿಲ್ಲದೆ ಸರಕಾರಿ ಭದ್ರತಾ ಪತ್ರದ ಧಾರಕನು, ಒತ್ತೆ, ಅಡಮಾನ ಅಥವಾ ಆಧಾರ ಜಾರಿಯಲ್ಲಿದ್ದಾಗ, ಬ್ಯಾಂಕು ಅಥವಾ ಅದರ ಏಜೆಂಟ್ ಅಂತಹ ಪತ್ರದ ವರ್ಗಾವಣೆ ಮಾಡುವಂತಿಲ್ಲ.

(4) ಬ್ಯಾಂಕು ಅಥವಾ ಸಂದರ್ಭಾನುಸಾರ ಅದರ ಏಜೆಂಟಿನ ಪುಸ್ತಕದಲ್ಲಿ ಒತ್ತೆ ಅಡಮಾನ ಅಥವಾ ಆಧಾರ ದಾಖಲಾದ ಸರಕಾರಿ ಭದ್ರತಾ ಪತ್ರ, ಮರುಪಾವತಿಗಾಗಿ ಪಕ್ವವಾದಾಗ, ಪಕ್ವಾವಧಿ ಉತ್ಪನ್ನಗಳನ್ನು, ಕ್ರಮಬದ್ಧವಾಗಿ ನಿರ್ವಹಿಸಿದ ನಮೂನೆ XVI ರೊಂದಿಗೆ ಒತ್ತೆ ಇಟ್ಟುಕೊಂಡವನ ಅಥವಾ ಸಾಲ ನೀಡಿದವನ ಲಿಖಿತ ಸಹಮತಿಯಿಲ್ಲದೆ ಭದ್ರತಾ ಪತ್ರದ ಧಾರಕನಿಗೆ ನೀಡುವಂತಿಲ್ಲ.

**ವಿವರಣೆ** – ನಿಯಂತ್ರಣ 21 ಮತ್ತು ಪ್ರಸ್ತುತ ನಿಯಂತ್ರಣಕ್ಕಾಗಿ :

(ಎ) ಒತ್ತೆ ಇಟ್ಟುಕೊಂಡವನು ಎಂದರೆ ಯಾರ ಪರವಾಗಿ ಸರಕಾರಿ ಭದ್ರತಾ ಪತ್ರವನ್ನು ಒತ್ತೆ ಇಡಲಾಗಿದೆಯೋ ಆ ವ್ಯಕ್ತಿ.

(ಬಿ) ಸಾಲ ನೀಡುವವನು ಎಂದರೆ ಯಾರ ಪರವಾಗಿ ಸರಕಾರಿ ಭದ್ರತಾ ಪತ್ರದ ಅಡಮಾನ ಅಥವಾ ಆಧಾರವನ್ನು ರೂಪಿಸಲಾಗಿದೆಯೋ ಆ ವ್ಯಕ್ತಿ.

**ನಮೂನೆ III**

[ನಿಯಂತ್ರಣಗಳು 4(1) (ಸಿ) ಮತ್ತು 21 ಗಮನಿಸಿ]

## ಸ್ಟಾಕ್ ಪತ್ರಗಳ ವರ್ಗಾವಣೆ

ಈ ಸಂಲೇಖದ ಮುಖಬರಹದಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಚಿತ ಬಡ್ಡಿಯೂ ಸೇರಿದ ಮೊತ್ತ . . . . . . . . . . . ರೂಗಳಿಗೆ; ವರ್ಗಾವಣೆ ಮಾಡುವವರಾದ . . . . . . . . . ನಾನು / ನಾವು* ಇಲ್ಲಿ ನಮೂದಿಸಿರುವ . . . . . . . . ಮೊತ್ತದ ಶೇ. . . . . . ರ ಸರ್ಕಾರಿ ಸಾಲ ಸಂಚಯ ಪತ್ರ ಸಂಖ್ಯೆ . . . . . . . ಯ ಮೊಬಲಗು/ ಸಂಚಯ ಪತ್ರದ ಭಾಗಶಃ ಮೊತ್ತ--------------------ರೂಗಳ ನನ್ನ/ನಮ್ಮ ಬಡ್ಡಿ/ ಪಾಲನ್ನು . . . . . . . ಅವರಿಗೆ(ವರ್ಗಾವಣೆಪಡೆದ ವ್ಯಕ್ತಿ)/ ಕಾರ /ಕಾರರು)/ ಅವನ/ ಅವಳ /ಅವರ* ಕಾರ್ಯನಿರ್ವಾಹಕರಿಗೆ/ ಆಡಳಿತದಾರರಿಗೆ/ ವಹಿಸಿಕೊಂಡವರಿಗೆ ವರ್ಗಾಯಿಸುತ್ತಿದ್ದೇನೆ/ ವೆ, ವಹಿಸುತ್ತಿದ್ದೇನೆ/ವೆ ಮತ್ತು . . . . . . . . . . . . ಆದ ನಾನು/ ನಾವು*(ವರ್ಗಾಯಿತಗೊಂಡು), ನನಗೆ/ ನಮಗೆ* ವರ್ಗಾಯಿತಲಾಗುತ್ತಿರುವ ಮೌಲ್ಯದ . . . . . . . . ಸಂಖ್ಯೆಯ ಸಂಚಯ ಪತ್ರವನ್ನು ವರ್ಗಾವಣೆಯಾದ ಮಟ್ಟಿಗೆ ಮುಕ್ತವಾಗಿ ಒಪ್ಪಿಕೊಳ್ಳುತ್ತಿದ್ದೇವೆ.

ನಾನು/ ನಾವು* . . . .  . . . . . (ವರ್ಗಾವಣೆ ಪಡೆದವ/ದವರು) ನನ್ನ/ ನಮ್ಮ* ನನಗೆ/ ನಮಗೆ* ವರ್ಗಾವಣೆಯಾದ ಮೇಲೆ ತಿಳಿಸಿದ ಬಂಡವಾಳ ಪತ್ರದ ಧಾರಕನಾಗಿ/ ರಾಗಿ ನನಗೆ/ ನಮಗೆ ವರ್ಗಾವಣೆಯಾದ ಮಟ್ಟಿಗೆ ನನ್ನ/ ನಮ್ಮ* ಹೆಸರಲ್ಲಿ ಬಂಡವಾಳ ಪತ್ರಗಳನ್ನು ನವೀಕರಿಸಬೇಕಾಗಿ/ ಪರಿವರ್ತಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ/ವೆ*.

@ವರ್ಗಾಯಿಸುವವರಾದ ನಾನು/ನಾವು* . . . . . . . . . (ವರ್ಗಾವಣೆ ಮಾಡುವವ/ವವರು) ಈ ಮೂಲಕ ವಿನಂತಿಸುವುದೇನೆಂದರೆ ಮೇಲೆ ತಿಳಿಸಿರುವ ವರ್ಗಾವಣೆ ಪಡೆದವ/ವರು ಈ ವರ್ಗಾವಣೆಯ ಮೂಲಕ ಸ್ಟಾಕ್ ಪತ್ರದ ಧಾರಕ/ರು ಆಗಿ ನೋಂದಾಯಿತರಾಗಿರುವುದರಿಂದ, ಅವನಿಗೆ/ ಅವರಿಗೆ* ಮೇಲೆ ತಿಳಿಸಿರುವಂತೆ ವರ್ಗಾವಣೆಯಾಗದಿರುವ ಮೌಲ್ಯದ ಸ್ಟಾಕ್ ಪತ್ರಗಳನ್ನು ನನ್ನ/ ನಮ್ಮ* ಹೆಸರಿಗೆ ನವೀಕರಿಸತಕ್ಕದ್ದು.

ಸಾಕ್ಷೀದಾರರ ಹಸ್ತಾಕ್ಷರ ________________ ದಿನಾಂಕ ___ತಿಂಗಳು_____ಎರಡು ಸಾವಿರದ ___

| | |
|---|---|
| ಮೇಲೆ ತಿಳಿಸಿದ ವರ್ಗಾವಣೆ ಮಾಡುವವರು ಈ ಕೆಳಗಿನವರ** ಸಮಕ್ಷಮದಲ್ಲಿ ಸಹಿ ಮಾಡಿರುತ್ತಾರೆ . . . . . . . .. ..<br>. . . . . . . . . . . . . . . . .<br>. . . . . . . .. . . . . . . . . . | ವರ್ಗಾವಣೆ ಮಾಡುವವನ ಸಹಿ .. . . . . .<br><br>ವಿಳಾಸ . . . . . . . . . . . .<br>. . . . . . . .. . . . . . . . .<br>. . . . . . . . . . . . . . . . . |
| ಮೇಲೆ ತಿಳಿಸಿದ ವರ್ಗಾವಣೆ ಪಡೆದವರು ಈ ಕೆಳಗಿನವರ** ಸಮಕ್ಷಮದಲ್ಲಿ ಸಹಿ ಮಾಡಿರುತ್ತಾರೆ . . . . . . . .. ..<br>. . . . . . . . . . . . . . . . .<br>. . . . . . . .. . . . . . . . . . | ವರ್ಗಾವಣೆ ಪಡೆಯುವವನ ಸಹಿ .. . . . . .<br>. . . . . . . . . . . .<br>. . . . . . . .. . . . . . . . .<br>. . . . . . . . . . . . . . . . . |

*ಅನ್ವಯಿಸದಿರುವುದನ್ನು ಹೊಡೆದುಹಾಕಿ
@ಭದ್ರತಾ ಪತ್ರವನ್ನು ಆಂಶಿಕವಾಗಿ ವರ್ಗಾಯಿಸಿದಾಗ, ಈ ಪ್ಯಾರಾವನ್ನು ಬಳಸಬೇಕು
**ಸಾಕ್ಷಿದಾರನ ಸಹಿ, ಉದ್ಯೋಗ ಮತ್ತು ವಿಳಾಸ. ವರ್ಗಾವಣೆ ಮಾಡುವವನ ಮತ್ತು ವರ್ಗಾವಣೆ ಪಡೆಯುವವನ ಸಾಕ್ಷಿಗಳು ಪ್ರತ್ಯೇಕವಾಗಿರಬೇಕು

ವರ್ಗಾಯಿಸಲಾಗಿದೆ:

ನೀಡಿದ ಬಂಡವಾಳ ಪತ್ರದ/ಗಳ ಸಂಖ್ಯೆ . . . . . . . . ದಿನಾಂಕ . . . . . . . . . .
ವ್ಯವಸ್ಥಾಪಕರು, ಭಾರತೀಯ ರಿಸರ್ವ್ ಬ್ಯಾಂಕ್, . . . . . . . . . . . . . . . . . . .

ನಮೂನೆ IV

(ನಿಯಂತ್ರಣಗಳು 4(1)(ಡಿ) ಮತ್ತು 21 ನೋಡಿ)

## ಭಾರತೀಯ ರಿಸರ್ವ್ ಬ್ಯಾಂಕಿನ(ಆರ್‌ಬಿಐ) ಘಟಕಗಳ ಸಹಾಯಕ ಸಾಮಾನ್ಯ ಲೆಜ್ಜರ್ ಖಾತೆ(ಸಿಎಸ್‌ಜಿಎಲ್) ಸೇರಿದಂತೆ ಸಹಾಯಕ ಸಾಮಾನ್ಯ ಲೆಜ್ಜರ್ ಖಾತೆಯಲ್ಲಿ(ಎಸ್‌ಜಿಎಲ್) ಹೊಂದಿರುವ ಸ್ಟಾಕ್ ಪತ್ರಗಳ ವರ್ಗಾವಣೆ

**ಸರಕಾರಿ ಭದ್ರತಾಪತ್ರಗಳಿಗೆ ಸಂಬಂಧಿಸಿದಂತೆ**

ಮಾರಾಟಗಾರರ ಉಲ್ಲೇಖ ಸಂಖ್ಯೆ ಕೊಳ್ಳುವವರ ಉಲ್ಲೇಖ ಸಂಖ್ಯೆ

(ಎ) ಭದ್ರತಾಪತ್ರಗಳ ವರ್ಗಾವಣೆ

1. ವರ್ಗಾವಣೆದಾರನ(ರ) (ಮಾರಾಟಗಾರ) ಹೆಸರು(ಗಳು) . . . . . . . . . . ಎಸ್‌ಜಿಎಲ್ ಅಥವಾ ಸಿಎಸ್‌ಜಿಎಲ್ ಖಾತೆ(ಖರ್ಚುಹಾಕುವುದು)
2. ವರ್ಗಾವಣೆ ಪಡೆದವನ(ಕೊಳ್ಳುವವನ) ಹೆಸರು(ಗಳು) . . . . . . . ಎಸ್‌ಜಿಎಲ್ ಅಥವಾ ಸಿಎಸ್‌ಜಿಎಲ್ ಖಾತೆ(ಜಮೆಗಾಗಿ)
3. ಮಾರಾಟ, ಘಟಕದ ಪರವಾಗಿ ನಡೆದಿದ್ದರೆ ಘಟಕದ ಹೆಸರು . . . . . . . . . .
4. ಖರೀದಿ, ಘಟಕದ ಪರವಾಗಿ ನಡೆದಿದ್ದರೆ ಘಟಕದ ಹೆಸರು . . . . . . . . . .
5. ಸರಕಾರಿ ಭದತಾಪತ್ರಗಳ ವಿವರಗಳು:

| ಕ್ರಮ ಸಂಖ್ಯೆ | ಭದ್ರತಾಪತ್ರದ ಶೀರ್ಷಿಕೆ ಹೆಸರು | ಐಎಸ್‌ಐಎನ್ | ಮುಖ ಬೆಲೆ (ರೂ.ಗಳಲ್ಲಿ) | ಭದ್ರತಾಪತ್ರದ ಮಾರಾಟ ಬೆಲೆ (ಶೇಕಡಾ) | ಭದ್ರತಾಪತ್ರದ ಒಟ್ಟು ವೆಚ್ಚ (ರೂ.ಗಳಲ್ಲಿ) (ಮಾರಾಟ ಬೆಲೆ/100 x ಮುಖಬೆಲೆ) | ಸಂಚಿತಬಡ್ಡಿ ರೂ. |
|---|---|---|---|---|---|---|
| | | | | | | |

(ಬಿ) ವಹಿವಾಟು ವಿವರಗಳು– ಸಾರಾಸಗಟು ಮತ್ತು ಮೊದಲ ಹಂತದ ರೇಪೊ ವ್ಯವಹಾರಗಳಿಗೆ ಅನ್ವಯಿಸುತ್ತವೆ.

1. ವಹಿವಾಟಿನ ಪ್ರಕಾರ – ಸಾರಾಸಗಟು / ರೇಪೊ
2. ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಅಂತರ್ ಬ್ಯಾಂಕ್ ರೇಪೊ?
3. ಒಪ್ಪಂದದ ದಿನಾಂಕ
4. ಇತ್ಯರ್ಥದ ದಿನಾಂಕ
5. ಆದಾಯ ತೆರಿಗೆ, ಏನಾದರೂ ಇದ್ದರೆ(ರೂ.ಗಳಲ್ಲಿ)
6. ಇತರೆ ಪಾವತಿಗಳು– ಏನಾದರೂ ಇದ್ದರೆ(ರೂ.)
7. ಪರಿಗಣನೆ ಮೊತ್ತ(ಸಂಖ್ಯೆಯಲ್ಲಿ) ರೂಗಳಲ್ಲಿ . . . . .. . . . .

ದಲ್ಲಾಳಿ ರುಸುಮು. . . . . . . . . ದಲ್ಲಾಳಿ ಕೋಡ್. . . . . . . . .

8. ಕೊಳ್ಳುವವರಿಗೆ ರೂ:
ದಲ್ಲಾಳಿ ರುಸುಮು. . . . . . . . . . .ದಲ್ಲಾಳಿ ಕೋಡ್. . . . . . . .

9. ಮಾರಾಟಗಾರರಿಗೆ ರೂ:

**(ಸಿ) ರೇಪೊ ವಹಿವಾಟುಗಳಿಗೆ ಸಂಬಂಧಿಸಿದ ವಿವರಗಳು:**

1. ಮರು ಖರೀದಿ ದಿನಾಂಕ: 2. ಮರುಖರೀದಿ ಒಪ್ಪಂದದ ದರ
(2ನೇ ಹಂತ . . . . . . . . . . . . . (ಪ್ರತಿಶತ)
3. ಮರು ಖರೀದಿ ಹಂತದಲ್ಲಿ ಪರಿಗಣನೆ ಮೊತ್ತ(ಅಕ್ಷರಗಳಲ್ಲಿ) ರೂ . . . . . . . . . .
ಮೇಲೆ ತಿಳಿಸಿದ ಎಸ್‌ಜಿಎಲ್ ಅಥವಾ ಸಿಎಸ್‌ಜಿಎಲ್ ಖಾತೆಗಳಿಗೆ ಜಮಾ/ ಖರ್ಚು ಹಾಕಲು ಭಾರತೀಯ ರಿಸರ್ವ್ ಬ್ಯಾಂಕಿಗೆ ನಾವು ಅಧಿಕಾರ ನೀಡುತ್ತೇವೆ ಮತ್ತು ಬಾಬು ಬಿ(7) ಮತ್ತು ಅಥವಾ ಸಿ(3)ನಲ್ಲಿ ಸಂದರ್ಭಾನುಸಾರ ಎದುರು ನಮೂದು ಮಾಡಿದ ಪರಿಗಣಿತ ಮೊತ್ತವನ್ನು ಈ ಬಗ್ಗೆ ಗೊತ್ತುಪಡಿಸಿದ ನಮ್ಮ ಚಾಲ್ತಿ ಖಾತೆಗಳು/ ಇತ್ಯರ್ಥ ಖಾತೆಗಳಿಗೆ ಜಮಾ/ ಖರ್ಚುಹಾಕಲು ಅಧಿಕಾರ ನೀಡುತ್ತೇವೆ.
ದಿನಾಂಕ. . . . . . ತಿಂಗಳು. . . . . . . ವರ್ಷದಂದು ಸಹಿಮಾಡಲಾಗಿದೆ.
ವರ್ಗಾವಣೆ ಮಾಡಿದವನ(ರ) ಸಹಿ: . . . . . . . ವರ್ಗಾವಣೆ ಪಡೆದವನ(ರ) ಸಹಿ: . . . .
ಪಿಎಎನ್ ಸಂಖ್ಯೆ: . . . . . . . ಪಿಎಎನ್ ಸಂಖ್ಯೆ ; . . . . . . . . . .
(ವಿದ್ಯುನ್ಮಾನ ಸಲ್ಲಿಕೆಯಾದಲ್ಲಿ ವರ್ಗಾವಣೆ ಮಾಡಿದವನ ಮತ್ತು ವರ್ಗಾವಣೆ ಪಡೆದವನ ಎಸ್‌ಜಿಎಲ್ ಖಾತೆಗೆ ಮತ್ತು ಚಾಲ್ತಿ ಖಾತೆಯ ಅಧಿಕೃತ ಅಧಿಕಾರಿಗಳ ಡಿಜಿಟಲ್ ಸಹಿಯು ಭೌತಿಕ ಸಹಿಯ ಜಾಗದಲ್ಲಿರುತ್ತದೆ)

ಟಿಪ್ಪಣಿ:

1. ನಮೂನೆಯನ್ನು, ಭಾರತೀಯ ರಿಸರ್ವ್ ಬ್ಯಾಂಕಿಗೆ, ವರ್ಗಾವಣೆ ನಮೂನೆ ಸಹಿಮಾಡಿದ ನಂತರ ಒಂದು ಕೆಲಸದ ದಿನಾಂಕದ ಒಳಗಾಗಿ ಮತ್ತು ಇತ್ಯರ್ಥದ ದಿನಾಂಕದಂದು ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಅದನ್ನು ತಿರಸ್ಕರಿಸಲಾಗುವುದು.
2. ನಮೂನೆಯಲ್ಲಿರುವ ಎಲ್ಲ ಸೂಚನೆಗಳನ್ನು ಪಾಲಿಸತಕ್ಕದ್ದು, ತಪ್ಪಿದಲ್ಲಿ ನಮೂನೆಯನ್ನು ತಿರಸ್ಕರಿಸಲಾಗುವುದು.
3. ಆದೇಶದ ಅನುಸಾರ ಎಸ್‌ಜಿಎಲ್ ಅಥವಾ ಸಿಎಸ್‌ಜಿಎಲ್ ಖಾತೆಗೆ ನಿಗದಿಪಡಿಸಿದ ಅಥವಾ ಸಂಪರ್ಕಹೊಂದಿದ ಚಾಲ್ತಿ ಖಾತೆಯನ್ನು ನಿರ್ವಹಿಸಲಾಗುತ್ತದೆ.
4. ರೇಪೊ ವಹಿವಾಟುಗಳಾಗಿದ್ದಲ್ಲಿ, ಮೇಲೆ ತಿಳಿಸಿದ ವಿಷಯ(ಸಿ)ಯಲ್ಲಿನ ವಿವರಗಳಂತೆ, ಮರುಖರೀದಿ ಹಂತವನ್ನು ಕಾರ್ಯಗತಗೊಳಿಸಲು ಈ ನಮೂನೆಯನ್ನು ಪರಿಗಣಿಸಲಾಗುತ್ತದೆ.
5. ಘಟಕಗಳ ಪರವಾಗಿ ನಡೆಸಿದ ವಹಿವಾಟುಗಳನ್ನು ತಕ್ಷಣ ಘಟಕದ ಪ್ರಧಾನ ಖಾತೆದಾರ(ಎಸ್‌ಜಿಎಲ್ ಖಾತೆದಾರ)ನ ಖಾತೆಯಲ್ಲಿ ಕಾರ್ಯಗತಗೊಳಿಸಬೇಕು.

# ನಮೂನೆ V

(ನಿಯಂತ್ರಣಗಳು 4(1)(ಇ) ಮತ್ತು 21 ನೋಡಿ)

## ಭಾರತೀಯ ರಿಸರ್ವ್ ಬ್ಯಾಂಕಿನ ಸರಕಾರಿ ಭದ್ರತಾಪತ್ರಗಳಿಗೆ ಸಂಬಂಧಿಸಿದ ಬಾಂಡ್ ಲೆಜ್ಜರ್ ಖಾತೆಯಲ್ಲಿರುವ ಭದ್ರತಾ ಪತ್ರಗಳ ವರ್ಗಾವಣೆ

ಸಂಚಿತ ಬಡ್ಡಿ ಸಮೇತ ______________ದಿನಾಂಕದಂದು ಪಾವತಿಯಾಗುವ ಬಾಂಡ್ ಲೆಡ್ಜರ್ ಖಾತಾ ಸಂಖ್ಯೆ ______________ಯಲ್ಲಿ ಹೊಂದಿರುವ ಬಾಂಡುಗಳ ಮೊತ್ತ ಅಥವಾ ಭಾಗವಾಗಿ _____________ ಬಾಂಡುಗಳ, ಬಾಂಡ್ ಲೆಡ್ಜರ್ ಖಾತೆಯ ____________ ಮೊತ್ತದಷ್ಟು ಬಡ್ಡಿ ಅಥವಾ ಪಾಲನ್ನು _________________________ನಾನು/ ನಾವು* ________________________ ಅವರಿಗೆ (ವರ್ಗಾಯಿತ ವ್ಯಕ್ತಿ/ವ್ಯಕ್ತಿಗಳು) ಅವನ / ಅವಳ / ಅವರ* ಕಾರ್ಯ ನಿರ್ವಾಹಕರಿಗೆ / ಆಡಳಿತದಾರರಿಗೆ / ವಹಿಸಿಕೊಂಡವರಿಗೆ ವರ್ಗಾಯಿಸುತ್ತಿದ್ದೇವೆ / ವಹಿಸುತ್ತಿದ್ದೇವೆ ಮತ್ತು__________________ ಆದ (ವರ್ಗಾಯಿತ ವ್ಯಕ್ತಿ /ವ್ಯಕ್ತಿಗಳು) ಮೇಲೆ ಹೇಳಿದ ಬಾಂಡ್ ಲೆಡ್ಜರ್ ಖಾತೆ ಸಂಖ್ಯೆ_________________ಯಲ್ಲಿರುವ ________________ ಮೌಲ್ಯವಷ್ಟು ಬಾಂಡುಗಳನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತಿದ್ದೇನೆ / ವೆ.

__________________ ಆದ ನಾನು/ನಾವು* (ವರ್ಗಾಯಿತ ವ್ಯಕ್ತಿ/ವ್ಯಕ್ತಿಗಳು) ನನ್ನನ್ನು / ನಮ್ಮನ್ನು* ಈ ಮೂಲಕ ವರ್ಗಾಯಿತವಾಗಿರುವ ಬಾಂಡುಗಳ ಧಾರಕರಾಗಿ ನೋಂದಾಯಿಸಬೇಕೆಂದು ಮತ್ತು ನನ್ನ / ನಮ್ಮ ಹೆಸರಿನಲ್ಲಿ ಬಾಂಡ್ ಲೆಡ್ಜರ್ ಖಾತೆ ತೆರೆದು, ನನ್ನ / ನಮ್* ಬಾಂಡ್ ಲೆಡ್ಜರ್ ಖಾತೆ ಸಂಖ್ಯೆ ______________ಗೆ ಜಮಾ ಮಾಡಬೇಕೆಂದು ಕೋರಲಾಗಿದೆ.

@ ನಾನು / ನಾವು*______________________ (ವರ್ಗಾವಣೆದಾರ/ರು) ಈ ಮೂಲಕ ಕೇಳಿಕೊಳ್ಳುವುದೇನೆಂದರೆ ಮೇಲೆ ತಿಳಿಸಿದ ವರ್ಗಾವಣೆಪಡೆದವರು ತಾವು ಈ ಮೂಲಕ ಪಡೆದ ವರ್ಗಾವಣೆಯಿಂದಾಗಿ ಬಾಂಡ್‌ನ ಧಾರಕನಾಗಿ(ರಾಗಿ)* ನೋಂದಾಯಿತರಾಗಿರುವುದರಿಂದ, ಮೇಲೆ ತಿಳಿಸಿದ ಬಾಂಡು ಅವನಿಗೆ / ಅವರಿಗೆ* ವಾರ್ಗಾವಣೆಯಾಗದಿರುವ ಮಟ್ಟಿಗೆ ನನ್ನ/ ನಮ್ಮ* ಬಾಂಡ್ ಲೆಜ್ಜರ್ ಖಾತೆಯಲ್ಲಿ ಮುಂದುವರಿಸಬಹುದು.

ಸಾಕ್ಷಿದಾರನಾಗಿ ನಮ್ಮ ಹಸ್ತಾಕ್ಷರದಲ್ಲಿ . .. . .ದಿನ . . . . . ತಿಂಗಳು . . . . . .
ಎರಡುಸಾವಿರದ . . . . . . . . . .

| | |
|---|---|
| ಮೇಲೆ ತಿಳಿಸಿದ ವರ್ಗಾವಣೆದಾರ . . . . . . . . . . .ಅವರ ಸಮಕ್ಷಮದಲ್ಲಿ** ಸಹಿ ಮಾಡಿರುತ್ತಾರೆ | ವರ್ಗಾವಣೆದಾರನ ಸಹಿ . . . . . . . . . . .<br>ವಿಳಾಸ. . . . . . . . . . . .. . .<br>. . . . . . . . . . . . . . . . . |
| ಮೇಲೆ ತಿಳಿಸಿದ ವರ್ಗಾವಣೆ ಪಡೆದವನು . . . . . . . . .ಅವರ ಸಮಕ್ಷಮದಲ್ಲಿ** ಸಹಿ ಮಾಡಿರುತ್ತಾರೆ | ವರ್ಗಾವಣೆ ಪಡೆದವನ ಸಹಿ . . . . . . . . . .<br>. . . . . . . . . . . . .. . .<br>. . . . . . . . . . . . . . . . . |

* ಅನ್ವಯಿಸದಿರುವುದನ್ನು ಹೊಡೆದುಹಾಕಿ

@ಈ ಪ್ಯಾರಾವನ್ನು ಬಾಂಡ್‌ನ ಭಾಗಶಃ ವರ್ಗಾವಣೆಯ ಸಂದರ್ಭದಲ್ಲಿ ಮಾತ್ರ ಬಳಸಿಕೊಳ್ಳತಕ್ಕದ್ದು

**ಸಾಕ್ಷಿಯ ಸಹಿ, ಉದ್ಯೋಗ ಮತ್ತು ವಿಳಾಸ. ವರ್ಗಾವಣೆದಾರನಿಗೆ ಮತ್ತು ವರ್ಗಾವಣೆ ಪಡೆಯುವವನ ಸಾಕ್ಷಿದಾರರು ಪ್ರತ್ಯೇಕವಾಗಿರಬೇಕು.

## ನಮೂನೆ XIV

(ನಿಯಂತ್ರಣಗಳು 21(1), (2), (3) ಮತ್ತು 22(2) ನೋಡಿ)

ಸರಕಾರಿ ಭದ್ರತಾ ಪತ್ರಗಳ ಒತ್ತೆ/ಅಡಮಾನ/ಆಧಾರದ ಸೂಚನೆ

| | | |
|---|---|---|
| ಗೆ,<br>ಪ್ರಾದೇಶಿಕ ನಿರ್ದೇಶಕರು,<br>ಭಾರತೀಯ ರಿಸರ್ವ್ ಬ್ಯಾಂಕ್<br>ಸಾರ್ವಜನಿಕ ಋಣ ಇಲಾಖೆ | ಗೆ,<br>ವ್ಯವಸ್ಥಾಪಕರು,<br>ಸಿ.ಎಸ್.ಜಿ.ಎಲ್ ಖಾತೆದಾರರ ಹೆಸರು. . . . . . . . .<br>ವಿಳಾಸ. . . . . . . . . . .<br>. . . . . . . . . . . . . . | ಗೆ,<br>ವ್ಯವಸ್ಥಾಪಕರು,<br>ಏಜೆಂಟರ ಹೆಸರು. . . . . . .<br>. . . . . . . . . . . . . .<br>ವಿಳಾಸ. . . . . . . . . . .<br>. . . . . . . . . . . . . . |

ಮಾನ್ಯರೆ,

ಈ ಗಮನಸೂಚಿಯ ಮೂಲಕ ನಾನು / ನಾವು________________________ (ಧಾರಕನ/ರ ಹೆಸರುಗಳು) ಸೂಚಿಸುವುದೇನೆಂದರೆ, ಇದರೊಂದಿಗೆ ಲಗತ್ತಿಸಿರುವ ಅನುಸೂಚಿ 'ಎ' ನಲ್ಲಿ ನಿಗದಿಪಡಿಸಿದ ಸರಕಾರಿ ಭದ್ರತಾ ಪತ್ರಗಳಮೇಲೆ ಒತ್ತೆ/ಅಡಮಾನ/ಅಧಾರ 1 ರೂಪಿಸಿರುತ್ತೇನೆ/ವೆ {ಮತ್ತು ಮೂಲ ಭದ್ರತಾ ಪತ್ರಗಳನ್ನು _______________________(ಒತ್ತೆ ಇಟ್ಟುಕೊಂಡವರ / ಸಾಲ ಕೊಡುವವರ ಹೆಸರು) ಬಳಿ ಇಟ್ಟಿರುತ್ತೇನೆ / ವೆ)}1. ಕ್ರಮಬದ್ಧವಾಗಿ ನಿರ್ವಹಿಸಿದ ವರ್ಗಾವಣೆ ಅರ್ಜಿಯನ್ನು ಒತ್ತೆ ಇಟ್ಟುಕೊಂಡವನ2 ಬಳಿ ಇರಿಸಲಾಗಿದೆ. ಅನುಸೂಚಿ 'ಎ'ನಲ್ಲಿ ಪಟ್ಟಿ ಮಾಡಿದ ಭದ್ರತಾ ಪತ್ರಗಳಮೇಲೆ ಒತ್ತೆ/ಅಡಮಾನ/ಆಧಾರ 1 ಅನ್ನು ದಯವಿಟ್ಟು ತಮ್ಮ ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಿ.

ನಿಮ್ಮ ವಿಶ್ವಾಸಿ

ಧಾರಕ/ರ / ಸಾಲ ಪಡೆದವ/ರ ಹೆಸರು(ಗಳು) ಮತ್ತು ಸಹಿ (ಗಳು)

ಪತ್ರವ್ಯವಹಾರಕ್ಕಾಗಿ ವಿಳಾಸ . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . .
ಒತ್ತೆ ಇಟ್ಟುಕೊಂಡವನ/ರ / ಸಾಲ ಕೊಟ್ಟವನ/ರ ಸಹಿ(ಗಳು) ಮತ್ತು ಹೆಸರು(ಗಳು)
ಪತ್ರವ್ಯವಹಾರಕ್ಕಾಗಿ ವಿಳಾಸ . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . .
ದಿನಾಂಕ. . . . . . .

## ಅನುಸೂಚಿ ‘ಎ’

| ಭದ್ರತಾ ಪತ್ರದ ಶೀರ್ಷಿಕೆಹೆಸರು ಮತ್ತು ಐ.ಎಸ್.ಐ.ಎನ್ | ಭೌತಿಕ ಭದ್ರತಾ ಪತ್ರದ ವಿಶಿಷ್ಟ ಸಂಖ್ಯೆ | ಎಸ್.ಜಿ.ಎಲ್/ ಸಿ.ಎಸ್.ಜಿ.ಎಲ್/ಬಾಂಡ್ ಲೆಡ್ಜರ್ ಖಾತಾ ಸಂಖ್ಯೆ | ಪಕ್ವತಾ ದಿನಾಂಕ | ಭದ್ರತಾ ಪತ್ರದ ಮುಖಬೆಲೆ |
|---|---|---|---|---|
| | | | | |

ಟಿಪ್ಪಣಿ: (i) ಈ ನಮೂನೆಯನ್ನು ತ್ರಿಪ್ರತಿಗಳಲ್ಲಿ ಸಲ್ಲಿಸಬೇಕು. ಕೌಂಟರ್‌ನಲ್ಲಿ ಸಲ್ಲಿಸಿದಲ್ಲಿ ಕೌಂಟರ್ ಸ್ವೀಕೃತಿಯನ್ನು ನೀಡಲಾಗುವುದು. ಸಾರ್ವಜನಿಕ ಋಣ ಇಲಾಖೆ, ಮೂಲ ಪ್ರತಿಯನ್ನು ಇರಿಸಿಕೊಳ್ಳುತ್ತದೆ. ಸಾರ್ವಜನಿಕ ಋಣ ಇಲಾಖೆಯ ಪುಸ್ತಕಗಳಲ್ಲಿ, ಒತ್ತೆ/ಅಡಮಾನ/ಆಧಾರ ದಾಖಲೀಕರಣದ ದೃಢೀಕರಣವನ್ನು ಎರಡನೆ ಮತ್ತು ಮೂರನೆ ಪ್ರತಿಗಳಲ್ಲಿ ನೀಡಲಾಗುತ್ತದೆ. ಧಾರಕ(ರು)/ಸಾಲ ಪಡೆಯುವವ(ರು) ಅಥವಾ ಒತ್ತೆ ಇಟ್ಟುಕೊಂಡವ(ರು) / ಸಾಲ ಕೊಡುವವ(ರು) ಕ್ರಮಬದ್ಧವಾಗಿ ಬಿಡುಗಡೆ ಮಾಡಿದ ಕೌಂಟರ್ ಸ್ವೀಕೃತಿಯನ್ನು ಸಲ್ಲಿಸಿ ದೃಢೀಕರಣ ಪತ್ರವನ್ನು ಪಡೆದುಕೊಳ್ಳಬಹುದು.

(ii) ಈ ನಮೂನೆಯನ್ನು ಕೌಂಟರ್ ಅಲ್ಲದೆ ಬೇರೆಡೆ ಸಲ್ಲಿಸಿದಲ್ಲಿ ನಮೂನೆಯ ಎರಡನೆ ಮತ್ತು ಮೂರನೆ ಪ್ರತಿಯನ್ನು ಅಂಚೆ / ಕೊರಿಯರ್ ಮೂಲಕ ಅಂಚೆ ವಿಳಾಸಕ್ಕೆ ಕಳುಹಿಸಲಾಗುತ್ತದೆ.

---

1 ಎಸ್.ಜಿ.ಎಲ್, ಸಿ.ಎಸ್.ಜಿ.ಎಲ್ ಖಾತೆ ಅಥವಾ ಬಿ.ಎಲ್.ಎನಲ್ಲಿ ಹೊಂದಿರುವ ಭದ್ರತಾ ಪತ್ರಗಳಮೇಲೆ ಅಡಮಾನ, ಆಧಾರ ರೂಪಿಸಿದಲ್ಲಿ – ಹೊಡೆದು ಹಾಕಿ
2 ಅಡಮಾನ ಅಥವಾ ಆಧಾರದ ಪ್ರಕರಣಗಳಲ್ಲಿ – ಹೊಡೆದು ಹಾಕಿ

ಕಚೇರಿ ಉಪಯೋಗಕ್ಕಾಗಿ ಮಾತ್ರ:

**ವಾಪಸಾತಿ ಮೆಮೊ**

ಒತ್ತೆ / ಅಡಮಾನ / ಆಧಾರವನ್ನು ಸಾರ್ವಜನಿಕ ಋಣ ಇಲಾಖೆ ಪುಸ್ತಕಗಳಲ್ಲಿ ಈ ಕೆಳಗಿನ ಕಾರಣಗಳಿಗಾಗಿ ದಾಖಲಿಸದಿರುವ ಬಗ್ಗೆ ಸೂಚನೆ.

ಭದ್ರತಾ ಪತ್ರ(ಗಳ) / ಖಾತೆ ಸಂಖ್ಯೆ(ಗಳ) ವಿವರಗಳಲ್ಲಿ ವ್ಯತ್ಯಾಸಗಳು.
ಧಾರಕರ ಹೆಸರುಗಳಲ್ಲಿ ವ್ಯತ್ಯಾಸಗಳು.
ನಮೂನೆ ಅಪೂರ್ಣವಾಗಿದೆ.
ಅಡಕಗಳನ್ನು ವ್ಯವಸ್ಥಿತವಾಗಿ ಸಂಕಲಿಸಿಲ್ಲ.
ಸಹಿ ಹೊಂದಾಣಿಕೆಯಾಗುವುದಿಲ್ಲ.

ಭದ್ರತಾ ಪತ್ರವು ಒತ್ತೆ / ಅಡಮಾನ / ಆಧಾರಕ್ಕೆ ಅರ್ಹವಾಗಿರುವುದಿಲ್ಲ.
ಭದ್ರತಾ ಪತ್ರವು ಬೇರೊಬ್ಬ ಸಾಲ ನೀಡುವವರ ಪರವಾಗಿ ಈಗಾಗಲೆ ಒತ್ತೆ / ಅಡಮಾನ / ಆಧಾರವಾಗಿರುತ್ತದೆ.
ಭದ್ರತಾ ಪತ್ರಗಳಿಗೆ ಸಂಬಂಧಿಸಿ ಕ್ಲೇಮುಗಳು ಬಾಕಿಯಿರುತ್ತವೆ.
ಪಾವತಿ ಸ್ಥಗಿತಗೊಳಿಸಲಾಗಿದೆ.
ಇತರೆ ಕಾರಣಗಳು . . . . . . . . . . . . . . . . . . . . . . . . . . . .

ಅಧಿಕೃತ ಅಧಿಕಾರಿ

**ದೃಢೀಕರಣ**

ಒತ್ತೆ / ಅಡಮಾನ / ಆಧಾರವನ್ನು ಸಾರ್ವಜನಿಕ ಋಣ ಇಲಾಖೆ/ ಸಿ ಎಸ್ ಜಿ ಎಲ್ ಖಾತೆದಾರಕ / ಏಜೆಂಟ್‌ರ ಪುಸ್ತಕಗಳಲ್ಲಿ ದಾಖಲಿಸಿದೆಯೆಂದು ದೃಢೀಕರಿಸಲಾಗಿದೆ.

ಅಧಿಕೃತ ಅಧಿಕಾರಿ

## ನಮೂನೆ XV

(ನಿಯಂತ್ರಣಗಳು 21(3), (4) ಮತ್ತು 22(2) ನೋಡಿ)

**ಒತ್ತೆ / ಅಡಮಾನ / ಆಧಾರದಲ್ಲಿರುವ ಸರಕಾರಿ ಭದ್ರತಾ ಪತ್ರಗಳ ವರ್ಗಾವಣೆಗಾಗಿ ಅರ್ಜಿ**

| | | |
|---|---|---|
| ಗೆ,<br>ಪ್ರಾದೇಶಿಕ ನಿರ್ದೇಶಕರು<br>ಭಾರತೀಯ ರಿಸರ್ವ್ ಬ್ಯಾಂಕ್<br>ಸಾರ್ವಜನಿಕ ಋಣ ಇಲಾಖೆ | ಗೆ,<br>ವ್ಯವಸ್ಥಾಪಕರು<br>ಸಿ.ಎಸ್.ಜಿ.ಎಲ್ ಖಾತೆದಾರರ ಹೆಸರು. . . . . . . . .<br>ವಿಳಾಸ. . . . . . . . . . .<br>. . . . . . . . . . . . . . | ಗೆ,<br>ವ್ಯವಸ್ಥಾಪಕರು<br>ಏಜೆಂಟರ ಹೆಸರು. . . . . . .<br>. . . . . . . . . . . . . . .<br>ವಿಳಾಸ. . . . . . . . . . .<br>. . . . . . . . . . . . . . |

ಮಾನ್ಯರೆ,

ಈ ಕೆಳಗೆ ಅನುಸೂಚಿ 'ಎ'ನಲ್ಲಿ ಪಟ್ಟಿ ಮಾಡಿರುವ ಭದ್ರತಾ ಪತ್ರಗಳಮೇಲೆ ಒತ್ತೆ / ಅಡಮಾನ / ಆಧಾರವನ್ನು* ರೂಪಿಸಲಾಗಿದೆ. ನಾನು / ನಾವು ಈ ಕೆಳಗೆ ಹೆಸರಿಸಿದ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸುತ್ತಿದ್ದೇವೆ.

(1) ಮೂಲ ಭದ್ರತಾ ಪತ್ರಗಳು 1

(2) ಒತ್ತೆ / ಅಡಮಾನ / ಆಧಾರಗಳ ದೃಢೀಕರಣವನ್ನು ನೀಡುವ ನಮೂನೆ XV ಮತ್ತು

(3) ನಮ್ಮ ಪರವಾಗಿ ನಿರ್ವಹಿಸಿದ (ಒತ್ತೆಯನ್ನು ರೂಪಿಸಿದ ಸಮಯದ) ವರ್ಗಾವಣೆ ಪತ್ರ 2

ನಾನು / ನಾವು ಕೇಳಿಕೊಳ್ಳುವುದೇನೆಂದರೆ, ಅನುಸೂಚಿ 'ಎ'ನಲ್ಲಿ ನಿಗದಿ ಪಡಿಸಿದ ಸರಕಾರಿ ಭದ್ರತಾ ಪತ್ರಗಳನ್ನು ನನ್ನ / ನಮ್ಮ ಪರವಾಗಿ ನಿಮ್ಮ ಲೆಕ್ಕ ಪುಸ್ತಕದಲ್ಲಿ ವರ್ಗಾವಣೆ ಮಾಡಿ.

ನಿಮ್ಮ ವಿಶ್ವಾಸಿ

ಸಾಲ ನೀಡುವಾವನ(ರ) ಸಹಿ(ಗಳು) ಮತ್ತು ಹೆಸರು(ಗಳು). . . . . . . . . . . . . . . .
ಅಂಚೆ ವಿಳಾಸ. . . . . . . . . . . . . . . . . . . . . .. . . . . . . . . . . .
ದಿನಾಂಕ. . . . . . . . . . . . . . . . . .

**ಅನುಸೂಚಿ 'ಎ'**

| ಭದ್ರತಾ ಪತ್ರ ಮತ್ತು ಐ.ಎಸ್.ಐ.ಎನ್ ಶೀರ್ಷಿಕೆಹೆಸರು | ಭೌತಿಕ ಭದ್ರತಾ ಪತ್ರದ ವಿಶಿಷ್ಟ ಸಂಖ್ಯೆ | ಎಸ್.ಜಿ.ಎಲ್/ ಸಿ.ಎಸ್.ಜಿ.ಎಲ್/ಬಾಂಡ್ ಲೆಡ್ಜರ್ ಖಾತಾ ಸಂಖ್ಯೆ | ಪಕ್ವತಾ ದಿನಾಂಕ | ಭದ್ರತಾ ಪತ್ರದ ಮುಖಬೆಲೆ |
|---|---|---|---|---|
| | | | | |

ಟಿಪ್ಪಣಿ: (i) ಈ ನಮೂನೆಯನ್ನು ತ್ರಿಪ್ರತಿಗಳಲ್ಲಿ ಸಲ್ಲಿಸಬೇಕು. ಕೌಂಟರ್‌ನಲ್ಲಿ ಸಲ್ಲಿಸಿದಲ್ಲಿ ಕೌಂಟರ್ ಸ್ವೀಕೃತಿಯನ್ನು ನೀಡಲಾಗುವುದು. ಸಾರ್ವಜನಿಕ ಋಣ ಇಲಾಖೆ, ಮೂಲ ಪ್ರತಿಯನ್ನು ಇರಿಸಿಕೊಳ್ಳುತ್ತದೆ. ಸಾರ್ವಜನಿಕ ಋಣ ಇಲಾಖೆಯ ಪುಸ್ತಕಗಳಲ್ಲಿ, ಒತ್ತೆ/ಅಡಮಾನ/ಆಧಾರದ ರದ್ದತಿಯ ದೃಢೀಕರಣವನ್ನು ಎರಡು ಮತ್ತು ಮೂರನೆ ಪ್ರತಿಗಳಲ್ಲಿ ನೀಡಲಾಗುತ್ತದೆ. ಧಾರಕ(ರು)/ಸಾಲ ಪಡೆಯುವವ(ರು) ಅಥವಾ ಒತ್ತೆ ಇಟ್ಟುಕೊಂಡವ(ರು) / ಸಾಲ ಕೊಡುವವ(ರು) ಕ್ರಮಬದ್ಧವಾಗಿ ಬಿಡುಗಡೆ ಮಾಡಿದ ಕೌಂಟರ್ ಸ್ವೀಕೃತಿಯನ್ನು ಸಲ್ಲಿಸಿ ದೃಢೀಕರಣ ಪತ್ರವನ್ನು ಪಡೆದುಕೊಳ್ಳಬಹುದು.

(ii) ಈ ನಮೂನೆಯನ್ನು ಕೌಂಟರ್ ಅಲ್ಲದೆ ಬೇರೆಡೆ ಸಲ್ಲಿಸಿದಲ್ಲಿ ನಮೂನೆಯ ಎರಡನೆ ಮತ್ತು ಮೂರನೆ ಪ್ರತಿಯನ್ನು ಅಂಚೆ / ಕೊರಿಯರ್ ಮೂಲಕ ಅಂಚೆ ವಿಳಾಸಕ್ಕೆ ಕಳುಹಿಸಲಾಗುತ್ತದೆ.

---

1 ಎಸ್.ಜಿ.ಎಲ್, ಸಿ.ಎಸ್.ಜಿ.ಎಲ್ ಖಾತೆ ಅಥವಾ ಬಿ.ಎಲ್.ಎನಲ್ಲಿ ಹೊಂದಿರುವ ಭದ್ರತಾ ಪತ್ರಗಳಮೇಲೆ ಅಡಮಾನ, ಆಧಾರ ರೂಪಿಸಿದಲ್ಲಿ – ಹೊಡೆದು ಹಾಕಿ

2 ಅಡಮಾನ ಅಥವಾ ಆಧಾರದ ಪ್ರಕರಣಗಳಲ್ಲಿ – ಹೊಡೆದು ಹಾಕಿ

*ಅನ್ವಯವಾಗದಿರುವುದನ್ನು ಹೊಡೆದು ಹಾಕಿ.

ಕಚೇರಿ ಉಪಯೋಗಕ್ಕಾಗಿ ಮಾತ್ರ:

**ವಾಪಸಾತಿ ಮೆಮೊ**

ಒತ್ತೆ / ಅಡಮಾನ / ಆಧಾರವನ್ನು ಸಾರ್ವಜನಿಕ ಋಣ ಇಲಾಖೆ ಪುಸ್ತಕಗಳಲ್ಲಿ ಈ ಕೆಳಗಿನ ಕಾರಣಗಳಿಗಾಗಿ ದಾಖಲಿಸದಿರುವ ಬಗ್ಗೆ ಸೂಚನೆ.

ಭದ್ರತಾ ಪತ್ರ(ಗಳ) / ಖಾತೆ ಸಂಖ್ಯೆ(ಗಳ) ವಿವರಗಳಲ್ಲಿ ವ್ಯತ್ಯಾಸಗಳು.
ಧಾರಕರ ಹೆಸರುಗಳಲ್ಲಿ ವ್ಯತ್ಯಾಸಗಳು.
ನಮೂನೆ ಅಪೂರ್ಣವಾಗಿದೆ.
ಅಡಕಗಳನ್ನು ವ್ಯವಸ್ಥಿತವಾಗಿ ಸಂಕಲಿಸಿಲ್ಲ.
ಸಹಿ ಹೊಂದಾಣಿಕೆಯಾಗುವುದಿಲ್ಲ.
ಭದ್ರತಾ ಪತ್ರಗಳಿಗೆ ಸಂಬಂಧಿಸಿ ಕ್ಲೇಮುಗಳು ಬಾಕಿಯಿರುತ್ತವೆ.
ಪಾವತಿ ಸ್ಥಗಿತಗೊಳಿಸಲಾಗಿದೆ.
ಇತರೆ ಕಾರಣಗಳು . . . . . . . . . . . . . . . . . . . . . . . . . . .

ಅಧಿಕೃತ ಅಧಿಕಾರಿ

**ದೃಢೀಕರಣ**

ಈ ಭದ್ರತಾಪತ್ರಗಳಿಗೆ ಸಂಬಂಧಿಸಿದಂತೆ ದಾಖಲಿಸಿದ  ಒತ್ತೆ / ಅಡಮಾನ / ಆಧಾರವನ್ನು ರದ್ದುಗೊಳಿಸಲಾಗಿದೆ ಮತ್ತು ಈ ಭದ್ರತಾ ಪತ್ರಗಳನ್ನು ಸಾರ್ವಜನಿಕ ಋಣ ಇಲಾಖೆಯ ಲೆಕ್ಕಪತ್ರದ ಪುಸ್ತಕಗಳಲ್ಲಿ ಸಾಲ ನೀಡಿದವರ ಪರವಾಗಿ ವರ್ಗಾಯಿಸಲಾಗಿದೆ.

ಅಧಿಕೃತ ಅಧಿಕಾರಿ

## ನಮೂನೆ XVI

(ನಿಯಂತ್ರಣಗಳು 21(5), (6) ಮತ್ತು 22(2) (4) ನೋಡಿ)

**ಒತ್ತೆ / ಅಡಮಾನ / ಆಧಾರಗಳ ರದ್ದತಿ**

| | | |
|---|---|---|
| ಗೆ,<br>ಪ್ರಾದೇಶಿಕ ನಿರ್ದೇಶಕರು<br>ಭಾರತೀಯ ರಿಸರ್ವ್ ಬ್ಯಾಂಕ್<br>ಸಾರ್ವಜನಿಕ ಋಣ ಇಲಾಖೆ | ಗೆ,<br>ವ್ಯವಸ್ಥಾಪಕರು<br>ಸಿ.ಎಸ್.ಜಿ.ಎಲ್ ಖಾತೆದಾರರ ಹೆಸರು. . . . . . . . .<br>ವಿಳಾಸ. . . . . . . . . . .<br>. . . . . . . . . . . . . . | ಗೆ,<br>ವ್ಯವಸ್ಥಾಪಕರು<br>ಏಜೆಂಟರ ಹೆಸರು. . . . . . .<br>. . . . . . . . . . . . . . .<br>ವಿಳಾಸ. . . . . . . . . . .<br>. . . . . . . . . . . . . . . |

ಮಾನ್ಯರೆ,

ಅನುಸೂಚಿ 'ಎ'ನಲ್ಲಿ ಪಟ್ಟಿಮಾಡಿರುವ ಸರಕಾರೀ ಭದ್ರತಾಪತ್ರಗಳ ಧಾರಕರು ಸದರಿ ಅನುಸೂಚಿಯಲ್ಲಿ ತಿಳಿಸಿದ ಭದ್ರತಾ ಪತ್ರಗಳ ಮೇಲೆ ಒತ್ತೆ / ಅಡಮಾನ / ಆಧಾರವನ್ನು* ನನ್ನ / ನಮ್ಮ ಪರವಾಗಿ ರೂಪಿಸಿರುತ್ತಾರೆ. ನಾನು / ನಾವು ನಿಮ್ಮ ಲೆಕ್ಕಪುಸ್ತಕದಲ್ಲಿ ಒತ್ತೆ / ಅಡಮಾನ / ಆಧಾರಗಳು ದಾಖಲಾದುದರ ಬಗ್ಗೆ ದೃಢೀಕರಣ ಸೂಚಿಸುವ ನಮೂನೆ XVರ ಎರಡನೇ ಪ್ರತಿಯ ಮೂಲವನ್ನು ಲಗತ್ತಿಸಿದ್ದೇನೆ/ವೆ ಮತ್ತು ಈ ಸರಕಾರಿ ಭದ್ರತಾಪತ್ರಗಳಿಗೆ ಸಂಬಂಧಿಸಿದಂತೆ ತಿಳಿಸಿದ ಒತ್ತೆ/ ಅಡಮಾನ/ ಆಧಾರವನ್ನು ರದ್ದುಮಾಡಿ ಒತ್ತೆ ಇಟ್ಟುಕೊಂಡವರು/ ಸಾಲ ನೀಡಿದವರಾಗಿ ದಾಖಲಾಗಿರುವ ನನ್ನ/ ನಮ್ಮ ಹೆಸರುಗಳನ್ನು ತೆಗೆದುಹಾಕಬೇಕೆಂದು ವಿನಂತಿಸುತ್ತೇನೆ.

ತಮ್ಮ ವಿಶ್ವಾಸಿ,
ಒತ್ತೆ ಇಟ್ಟುಕೊಂಡವ(ರ)/ ಸಾಲ ನೀಡಿದವ(ರ) ಹೆಸರು(ಗಳು) ಮತ್ತು ಸಹಿ(ಗಳು)
ಅಂಚೆ ವಿಳಾಸ
ದಿನಾಂಕ. . . . . .. .
*ಅನ್ವಯಿಸದಿರುವುದನ್ನು ಹೊಡೆದುಹಾಕಿ

**ಅನುಸೂಚಿ 'ಎ'**

| ಭದ್ರತಾ ಪತ್ರದ ಶೀರ್ಷಿಕೆ ಹೆಸರು ಮತ್ತು ಐ.ಎಸ್.ಐ.ಎನ್ | ಭೌತಿಕ ಭದ್ರತಾ ಪತ್ರದ ವಿಶಿಷ್ಟ ಸಂಖ್ಯೆ | ಎಸ್.ಜಿ.ಎಲ್/ ಸಿ.ಎಸ್.ಜಿ.ಎಲ್/ಬಾಂಡ್ ಲೆಡ್ಜರ್ ಖಾತಾ ಸಂಖ್ಯೆ | ಪಕ್ವತಾ ದಿನಾಂಕ | ಭದ್ರತಾ ಪತ್ರದ ಮುಖಬೆಲೆ |
|---|---|---|---|---|
| | | | | |

ಟಿಪ್ಪಣಿ: (i) ಈ ನಮೂನೆಯನ್ನು ತ್ರಿಪ್ರತಿಗಳಲ್ಲಿ ಸಲ್ಲಿಸಬೇಕು. ಕೌಂಟರ್‌ನಲ್ಲಿ ಸಲ್ಲಿಸಿದಲ್ಲಿ ಕೌಂಟರ್ ಸ್ವೀಕೃತಿಯನ್ನು ನೀಡಲಾಗುವುದು. ಸಾರ್ವಜನಿಕ ಋಣ ಇಲಾಖೆ, ಮೂಲ ಪ್ರತಿಯನ್ನು ಇರಿಸಿಕೊಳ್ಳುತ್ತದೆ. ಸಾರ್ವಜನಿಕ ಋಣ ಇಲಾಖೆಯ ಪುಸ್ತಕಗಳಲ್ಲಿ, ಒತ್ತೆ/ಅಡಮಾನ/ಆಧಾರ ದಾಖಲೀಕರಣದ ದೃಢೀಕರಣವನ್ನು ಎರಡು ಮತ್ತು ಮೂರನೆ ಪ್ರತಿಗಳ ಮೇಲೆ ನೀಡಲಾಗುತ್ತದೆ. ಧಾರಕ(ರು)/ಸಾಲ ಪಡೆಯುವವ(ರು) ಅಥವಾ ಒತ್ತೆ ಇಟ್ಟುಕೊಂಡವ(ರು) / ಸಾಲ ಕೊಡುವವ(ರು) ಕ್ರಮಬದ್ಧವಾಗಿ ಬಿಡುಗಡೆ ಮಾಡಿದ ಕೌಂಟರ್ ಸ್ವೀಕೃತಿಯನ್ನು ಸಲ್ಲಿಸಿ ದೃಢೀಕರಣ ಪತ್ರವನ್ನು ಪಡೆದುಕೊಳ್ಳಬಹುದು.

(ii) ಈ ನಮೂನೆಯನ್ನು ಕೌಂಟರ್ ಅಲ್ಲದೆ ಬೇರೆ ರೀತಿ ಸಲ್ಲಿಸಿದಲ್ಲಿ ನಮೂನೆಯ ಎರಡನೆ ಮತ್ತು ಮೂರನೆ ಪ್ರತಿಯನ್ನು ಅಂಚೆ / ಕೊರಿಯರ್ ಮೂಲಕ ಅಂಚೆ ವಿಳಾಸಕ್ಕೆ ಕಳುಹಿಸಲಾಗುತ್ತದೆ.

ಕಚೇರಿ ಉಪಯೋಗಕ್ಕಾಗಿ ಮಾತ್ರ:

**ವಾಪಸಾತಿ ಮೆಮೊ**

ಒತ್ತೆ / ಅಡಮಾನ / ಆಧಾರವನ್ನು ಸಾರ್ವಜನಿಕ ಋಣ ಇಲಾಖೆ ಪುಸ್ತಕಗಳಲ್ಲಿ ದಾಖಲಿಸದಿರುವ ಕಾರಣಗಳು:

ಭದ್ರತಾ ಪತ್ರ(ಗಳ) / ಖಾತೆ ಸಂಖ್ಯೆ(ಗಳ) ವಿವರಗಳಲ್ಲಿ ವ್ಯತ್ಯಾಸಗಳು.
ಧಾರಕರ ಹೆಸರುಗಳಲ್ಲಿ ವ್ಯತ್ಯಾಸಗಳು.
ನಮೂನೆ ಅಪೂರ್ಣವಾಗಿದೆ.
ಅಡಕಗಳನ್ನು ವ್ಯವಸ್ಥಿತವಾಗಿ ಸಂಕಲಿಸಿಲ್ಲ.
ಸಹಿ ಹೊಂದಾಣಿಕೆಯಾಗುವುದಿಲ್ಲ.
ಇತರೆ ಕಾರಣಗಳು . . . . . . . . . . . . . . . . . . . . . . . . . . . .

ಅಧಿಕೃತ ಅಧಿಕಾರಿ

**ದೃಢೀಕರಣ**

ಈ ಭದ್ರತಾಪತ್ರಗಳಿಗೆ ಸಂಬಂಧಿಸಿ ದಾಖಲಿಸಿದ ಒತ್ತೆ / ಅಡಮಾನ / ಆಧಾರವನ್ನು ಸಾರ್ವಜನಿಕ ಋಣ ಇಲಾಖೆಯ ಲೆಕ್ಕಪತ್ರದ ಪುಸ್ತಕಗಳಲ್ಲಿ ರದ್ದುಗೊಳಿಸಲಾಗಿದೆಯೆಂದು ದೃಢೀಕರಿಸಿದೆ.

ಅಧಿಕೃತ ಅಧಿಕಾರಿ

## ಪತ್ರಿಕಾ ಪ್ರಕಟಣೆ

7% ಉಳಿತಾಯ ಬಾಂಡುಗಳು 2002, 6.5% ಉಳಿತಾಯ (ತೆರಿಗೆಗೆ ಒಳಪಡದ) ಬಾಂಡುಗಳು 2003 ಮತ್ತು 8% ಉಳಿತಾಯ (ತೆರಿಗೆಗೆ ಒಳಪಡುವ) ಬಾಂಡುಗಳು 2003 ಯೋಜನೆಗಳಿಗೆ ಸಂಬಂಧಪಟ್ಟಂತೆ, ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು ಸಹಭದ್ರತೆಯಾಗಿ ಮೇಲೆ ಉಲ್ಲೇಖಿಸಲಾದ ಬಾಂಡುಗಳನ್ನು ಒತ್ತೆ/ಅಡಮಾನ/ಆಧಾರ ಮಾಡಲು ಅನುಮತಿಸುವುದಕ್ಕಾಗಿ ಭಾರತ ಸರಕಾರ ಸಂಬಂಧಿತ ಅಧಿಸೂಚನೆಯನ್ನು ತಿದ್ದುಪಡಿ ಮಾಡಿದೆ. ಇದರನ್ವಯ ಸರಕಾರಿ ಭದ್ರತಾ ಕಾಯಿದೆ 2006ರ ಪ್ರಕರಣ 28 ಮತ್ತು ಸರಕಾರಿ ಭದ್ರತಾ ನಿಯಂತ್ರಣಗಳು 2007ರ ನಿಯಂತ್ರಣ 21 ಮತ್ತು 22ರಂತೆ, ಮೇಲೆ ಉಲ್ಲೆಖಿಸಿದ ಬಾಂಡುಗಳ ಧಾರಕರು ಅನುಸೂಚಿತ ಬ್ಯಾಂಕುಗಳ ಹೆಸರಿನಲ್ಲಿ ಆಧಾರ, ಒತ್ತೆ ಹಾಗೂ ಅಡಮಾನ ಮಾಡಲು ಅರ್ಹರಾಗಿರುತ್ತಾರೆ.

2. ಮೇಲೆ ಉಲ್ಲೇಖಿಸಿದ ಬಾಂಡುಗಳಿಗೆ ಸಂಬಂಧಿಸಿದಂತೆ ಮಿಕ್ಕೆಲ್ಲ ಶರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಭಾರತ ಸರಕಾರ
ಹಣಕಾಸು ಸಚಿವಾಲಯ
ವಿತ್ತ ವ್ಯವಹಾರಗಳ ಇಲಾಖೆ

ದಿನಾಂಕ : 19 ಆಗಸ್ಟ್, 2008

ಭಾರತ ಸರಕಾರ
ಹಣಕಾಸು ಸಚಿವಾಲಯ
ಆರ್ಥಿಕ ವ್ಯವಹಾರಗಳ ಇಲಾಖೆ
ನವದೆಹಲಿ, ದಿನಾಂಕ : 19 ಆಗಸ್ಟ್, 2008

# ಅಧಿಸೂಚನೆ

7% ಉಳಿತಾಯ ಬಾಂಡುಗಳು 2002

ನಂ. ಎಫ್4(13)ಡಬ್ಲ್ಯು ಮತ್ತು ಎಮ್/2002: ಅಧಿಸೂಚನೆ ಸಂಖ್ಯೆ ಎಫ್4(13)– ಡಬ್ಲ್ಯು ಮತ್ತು ಎಮ್/2002 ದಿನಾಂಕ 05 ಸೆಪ್ಟೆಂಬರ್, 2002 (ಅಧಿಸೂಚನೆ) ರಲ್ಲಿ ಈ ಕೆಳಗಿನ ಮಾರ್ಪಾಡುಗಳನ್ನು, ಈ ಅಧಿಸೂಚನೆ ದಿನಾಂಕದಿಂದ ಜಾರಿಗೊಳಿಸುವಂತೆ, ಭಾರತ ಸರಕಾರವು ಈ ಮೂಲಕ ಸೂಚಿಸುತ್ತದೆ.

1. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 12 ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

"ಬಾಂಡ್ ಲೆಡ್ಜರ್ ಖಾತೆಯಲ್ಲಿರುವ ಬಾಂಡುಗಳು ಮತ್ತು ಸ್ಟಾಕ್ ಪತ್ರಗಳನ್ನು, ಇಲ್ಲಿ ತಿಳಿಸಿರುವ ಪ್ರಕಾರದಂತೆ ಅಥವಾ ಭಾರತೀಯ ಕಂಪೆನಿಗಳ ಕಾಯಿದೆ 1956ರ ಕಲಮು 6ರಲ್ಲಿ ವ್ಯಾಖ್ಯಾನಿಸಿದಂತೆ ಅನುಬಂಧ 6ಎ ಅಥವಾ 6ಬಿ(ಅನ್ವಯಿಸುವಂತೆ) ಯಲ್ಲಿ ಉಲ್ಲೇಖಿಸಲಾಗಿರುವ ಯುಕ್ತ ವರ್ಗಾವಣೆ ನಮೂನೆಯನ್ನು ತುಂಬಿ ಸಲ್ಲಿಸುವುದರ ಮೂಲಕ ಮತ್ತು ಧಾರಕನು ಘೋಷಣಾಪತ್ರವನ್ನು ಬರೆದುಕೊಡುವುದರ ಮೂಲಕ ಬಂಧುವಿಗೆ ಉಡುಗೊರೆ ರೂಪದಲ್ಲಿ ಮಾತ್ರ ವರ್ಗಾವಣೆ ಮಾಡಬೇಕೇ ಹೊರತು ಅನ್ಯ ಮಾರ್ಗಗಳನ್ನು ಅನುಸರಿಸುವಂತಿಲ್ಲ. ಅನುಬಂಧ 7ರಲ್ಲಿ ಬಂಧುಗಳ ಪಟ್ಟಿಯನ್ನು ನೀಡಲಾಗಿದೆ."

2. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 14ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

'ಬಾಂಡುಗಳ ವಹಿವಾಟನ್ನು ಪೂರಕ–ಮಾರುಕಟ್ಟೆಯಲ್ಲಿ ಮಾಡುವಂತಿಲ್ಲ. ಆದರೂ, ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು ಬಾಂಡುಗಳನ್ನು ಸಹಭದ್ರತೆಯಾಗಿ ಬಳಸಬಹುದು. ಮತ್ತು ಸರಕಾರಿ ಭದ್ರತಾ ಕಾಯಿದೆ 2006ರ ಪ್ರಕರಣ 28 ಮತ್ತು ಸರಕಾರಿ ಭದ್ರತಾ ನಿಯಂತ್ರಣಗಳು 2007ರ ನಿಯಂತ್ರಣ 21 ಮತ್ತು 22ರಂತೆ, ಮೇಲೆ ಉಲ್ಲೆಖಿಸಿದ ಬಾಂಡುಗಳ ಧಾರಕರು ಅನುಸೂಚಿತ ಬ್ಯಾಂಕುಗಳ ಹೆಸರಿನಲ್ಲಿ ಆಧಾರ, ಒತ್ತೆ ಹಾಗೂ ಅಡಮಾನ ಮಾಡಲು ಅರ್ಹರಾಗಿರುತ್ತಾರೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ

(ಎಲ್.ಎಮ್.ವಾಸ್)
ಹೆಚ್ಚುವರಿ ಕಾರ್ಯದರ್ಶಿ – ಭಾರತ ಸರಕಾರ

ಭಾರತ ಸರಕಾರ

ಹಣಕಾಸು ಸಚಿವಾಲಯ

ಆರ್ಥಿಕ ವ್ಯವಹಾರಗಳ ಇಲಾಖೆ

ನವದೆಹಲಿ, ದಿನಾಂಕ : 19 ಆಗಸ್ಟ್, 2008

# ಅಧಿಸೂಚನೆ

6.5% ಉಳಿತಾಯ ಬಾಂಡುಗಳು 2003(ತೆರಿಗೆಗೆ ಒಳಪಡದ)

ನಂ. ಎಫ್4(9)–ಡಬ್ಲ್ಯು ಮತ್ತು ಎಮ್/2003: ಅಧಿಸೂಚನೆ ಸಂಖ್ಯೆ ಎಫ್4(9)– ಡಬ್ಲ್ಯು ಮತ್ತು ಎಮ್/2003 ದಿನಾಂಕ 13 ಮಾರ್ಚ್ 2003 (ಅಧಿಸೂಚನೆ) ರಲ್ಲಿ ಈ ಕೆಳಗಿನ ಮಾರ್ಪಾಡುಗಳನ್ನು ಈ ಅಧಿಸೂಚನೆ ದಿನಾಂಕದಿಂದ ಜಾರಿಗೊಳಿಸುವಂತೆ ಭಾರತ ಸರಕಾರವು ಈ ಮೂಲಕ ಸೂಚಿಸುತ್ತದೆ.

1. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 12 ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

'ಬಾಂಡ್ ಲೆಡ್ಜರ್ ಖಾತೆಯಲ್ಲಿರುವ ಬಾಂಡುಗಳು ಮತ್ತು ನಿಧಿ ಪತ್ರಗಳನ್ನು, ಇಲ್ಲಿ ತಿಳಿಸಿರುವ ಪ್ರಕಾರದಂತೆ ಅಥವಾ ಭಾರತೀಯ ಕಂಪೆನಿಗಳ ಕಾಯಿದೆ 1956ರ ಕಲಮು 6ರಲ್ಲಿ ವ್ಯಾಖ್ಯಾನಿಸಿದಂತೆ ಅನುಬಂಧ 6ಎ ಅಥವಾ 6ಬಿ(ಅನ್ವಯಿಸುವಂತೆ) ಯಲ್ಲಿ ಉಲ್ಲೇಖಿಸಲಾಗಿರುವ ಯುಕ್ತ ವರ್ಗಾವಣೆ ನಮೂನೆಯನ್ನು ತುಂಬಿ ಸಲ್ಲಿಸುವುದರ ಮೂಲಕ ಮತ್ತು ಧಾರಕನು ಘೋಷಣಾಪತ್ರವನ್ನು ಬರೆದುಕೊಡುವುದರ ಮೂಲಕ ಬಂಧುವಿಗೆ ಉಡುಗೊರೆ ರೂಪದಲ್ಲಿ ಮಾತ್ರ ವರ್ಗಾವಣೆ ಮಾಡಬೇಕೇ ಹೊರತು ಅನ್ಯ ಮಾರ್ಗಗಳನ್ನು ಅನುಸರಿಸುವಂತಿಲ್ಲ. ಅನುಬಂಧ 7ರಲ್ಲಿ ಬಂಧುಗಳ ಪಟ್ಟಿಯನ್ನು ನೀಡಲಾಗಿದೆ.'

2. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 14ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

'ಬಾಂಡುಗಳ ವಹಿವಾಟನ್ನು ಪೂರಕ–ಮಾರುಕಟ್ಟೆಯಲ್ಲಿ ಮಾಡುವಂತಿಲ್ಲ. ಆದರೂ, ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು ಬಾಂಡುಗಳನ್ನು ಸಹಭದ್ರತೆಯಾಗಿ ಬಳಸಬಹುದು. ಸರಕಾರಿ ಭದ್ರತಾ ಕಾಯಿದೆ 2006ರ ಪ್ರಕರಣ 28 ಮತ್ತು ಸರಕಾರಿ ಭದ್ರತಾ ನಿಯಂತ್ರಣಗಳು 2007ರ ನಿಯಂತ್ರಣ 21 ಮತ್ತು 22ರಂತೆ, ಮೇಲೆ ಉಲ್ಲೆಖಿಸಿದ ಬಾಂಡುಗಳ ಧಾರಕರು ಅನುಸೂಚಿತ ಬ್ಯಾಂಕುಗಳ ಹೆಸರಿನಲ್ಲಿ ಆಧಾರ, ಒತ್ತೆ ಹಾಗೂ ಅಡಮಾನ ಮಾಡಲು ಅರ್ಹರಾಗಿರುತ್ತಾರೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ

(ಎಲ್.ಎಮ್.ವಾಸ್)

ಹೆಚ್ಚುವರಿ ಕಾರ್ಯದರ್ಶಿ – ಭಾರತ ಸರಕಾರ

ಭಾರತ ಸರಕಾರ
ಹಣಕಾಸು ಸಚಿವಾಲಯ
ಆರ್ಥಿಕ ವ್ಯವಹಾರಗಳ ಇಲಾಖೆ
ನವದೆಹಲಿ, ದಿನಾಂಕ : 19 ಆಗಸ್ಟ್, 2008

# ಅಧಿಸೂಚನೆ

8% ಉಳಿತಾಯ (ತೆರಿಗೆಗೆ ಒಳಪಡುವ) ಬಾಂಡುಗಳು 2003

ನಂ. ಎಫ಼್4(10)ಡಬ್ಲ್ಯು ಮತ್ತು ಎಮ್/2003: ಅಧಿಸೂಚನೆ ಸಂಖ್ಯೆ ಎಫ಼್4(10)ಡಬ್ಲ್ಯು ಮತ್ತು ಎಮ್/2003 ದಿನಾಂಕ 21 ಮಾರ್ಚ್, 2003 (ಅಧಿಸೂಚನೆ)ರಲ್ಲಿ ಈ ಕೆಳಗಿನ ಮಾರ್ಪಾಡುಗಳನ್ನು ಈ ಅಧಿಸೂಚನೆ ದಿನಾಂಕದಿಂದ ಜಾರಿಗೊಳಿಸುವಂತೆ ಭಾರತ ಸರಕಾರವು ಈ ಮೂಲಕ ಸೂಚಿಸುತ್ತದೆ.

1. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 12ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

"ಬಾಂಡ್ ಲೆಡ್ಜರ್ ಖಾತೆಯಲ್ಲಿರುವ ಬಾಂಡುಗಳನ್ನು ಇಲ್ಲಿ ಒದಗಿಸಲಾಗಿರುವ ನಿಯಮಗಳನ್ನು ಹೊರತುಪಡಿಸಿ ವರ್ಗಾವಣೆ ಮಾಡುವಂತಿಲ್ಲ."

2. ಅಧಿಸೂಚನೆಯಲ್ಲಿ ಈಗಿರುವ ಪ್ಯಾರಾ ಸಂಖ್ಯೆ 15ರ ಬದಲಾಗಿ ಈ ಕೆಳಗಿನ ಪ್ಯಾರಾ ಸೇರಿಕೊಳ್ಳಬೇಕು. ಅದ್ಯಾವುದೆಂದರೆ :

'ಬಾಂಡುಗಳ ವಹಿವಾಟನ್ನು ಪೂರಕ–ಮಾರುಕಟ್ಟೆಯಲ್ಲಿ ಮಾಡುವಂತಿಲ್ಲ. ಆದರೂ, ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು ಬಾಂಡುಗಳನ್ನು ಸಹಭದ್ರತೆಯಾಗಿ ಬಳಸಬಹುದು. ಸರಕಾರಿ ಭದ್ರತಾ ಕಾಯಿದೆ 2006ರ ಪ್ರಕರಣ 28 ಮತ್ತು ಸರಕಾರಿ ಭದ್ರತಾ ನಿಯಂತ್ರಣಗಳು 2007ರ ನಿಯಂತ್ರಣ 21 ಮತ್ತು 22ರಂತೆ, ಮೇಲೆ ಉಲ್ಲೆಖಿಸಿದ ಬಾಂಡುಗಳ ಧಾರಕರು ಅನುಸೂಚಿತ ಬ್ಯಾಂಕುಗಳ ಹೆಸರಿನಲ್ಲಿ ಆಧಾರ, ಒತ್ತೆ ಹಾಗೂ ಅಡಮಾನ ಮಾಡಲು ಅರ್ಹರಾಗಿರುತ್ತಾರೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ

(ಎಲ್.ಎಮ್.ವಾಸ್)
ಹೆಚ್ಚುವರಿ ಕಾರ್ಯದರ್ಶಿ – ಭಾರತ ಸರಕಾರ